ಸಂಪುಟ : 9 ಸಂಚಿಕೆ 303 ಪುಟ : 4+2 ಬೆಲೆ: 3.00 ಬುಧವಾರ ಜನವರಿ 15 2025 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 303 Pages : 4+2 Price : 3.00 Wednesday January 15 2025 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಹೂವಿನಶಿಗ್ಲಿಯಲ್ಲಿ ವೈಭವದ ರಥೋತ್ಸವ



■ವಿಜಯಸಾಕ್ಷಿ ಸುದ್ದಿ, ಹೂವಿನಶಿಗ್ಲಿ

ಹೂವಿನಶಿಗ್ಲಿ ವಿರಕ್ತಮಠದ ಜಾತ್ರಾಮಹೋತ್ಸವದ ಅಂಗವಾಗಿ ಮಕರ ಸಂಕ್ರಮಣಕಾಲದ ಗೋಧೂಳಿ ಸಮಯದಲ್ಲಿ ಮಂಗಳವಾರ ಅಪಾರ ಭಕ್ತ ಸಮೂಹದ ನಡುವೆ ಸಕಲ ವಾದ್ಯ ವೈಭವಗಳೊಂದಿಗೆ ಮಹಾರಥೋತ್ಸವ ನೆರವೇರಿತು.

ಬೆಳಿಗ್ಗೆ ನಿರಂಜನ ಶ್ರೀಗಳ ಕರ್ತೃ ಗದ್ದುಗೆ ರುದ್ರಾಭಿಷೇಕ, ವಿಶೇಷ ಹೂವಿನ ಅಲಂಕಾರ, ಮಂಗಳಾರತಿ, ಲಿಂ.ಶ್ರೀಗಳ ಭಾವಚಿತ್ರ ಮೆರವಣಿಗೆ, ಗುರು ಗುಹೆಸಿದ್ದೇಶ್ವರ ಉತ್ಸವ ಮೂರ್ತಿಯ ಮೆರವಣಿಗೆ ಸೂರಣಗಿ ಹಾಗೂ ಯಲವಿಗಿ ಗ್ರಾಮದ ಪುರವಂತರ ವೀರಗಾಸೆಯೊಂದಿಗೆ ನಡೆಯಿತು. ಬೆಳಗಿನಿಂದಲೇ ಮಹಿಳೆಯರು, ಮಕ್ಕಳು ಹೊಸ ಉಡುಗೆ ತೊಟ್ಟು ಶ್ರೀಮಠಕ್ಕೆ ಆಗಮಿಸಿದ್ದರು. ರಥಕ್ಕೆ ಹೊಸ ವಸ್ತ್ರಾಭರಣಗಳನ್ನಿರಿಸಿ ಉಡಿ ತುಂಬಿ ಶ್ರದ್ಧಾ ಭಕ್ತಿಯಿಂದ ಪೂಜಿಸಿದರು.

ಸಂಜೆ ರಥ ಸಾಗುತ್ತಿದ್ದಂತೆಯೇ ಸೇರಿದ್ದ ಅಪಾರ ಭಕ್ತ ಸಮೂಹ ಭಕ್ತಿ-ಭಾವಗಳಿಂದ ಉತ್ತತ್ತಿ, ಹಣ್ಣುಗಳನ್ನು ತೇರಿಗೆ ಎಸೆದು ಘೋಷಣೆಗಳನ್ನು ಕೂಗಿದರು. ಡೊಳ್ಳು, ನಂದಿಕೋಲು, ಕೀಲುಕುದುರೆ ನೃತ್ಯ, ಸಕಲ ವಾದ್ಯ ವೈಭವದೊಂದಿಗೆ ಅಪಾರ ಭಕ್ತ ಸಮೂಹದೊಂದಿಗೆ ರಥೋತ್ಸವ ಜರುಗಿ-ತು. ಈ ವೇಳೆ ಶ್ರೀಮಠ ಚನ್ನವೀರ ಶ್ರೀಗಳು ಸೇರಿ ಧಾರವಾಡ, ಬೆಳ್ಳಟ್ಟಿ, ಹಿರೇಮಣಕಟ್ಟಿ, ಬಳೂಟಗಿ ಶ್ರೀಗಳು ಉಪಸ್ಥಿತರಿದ್ದು ಭಕ್ತರನ್ನು ಆಶೀರ್ವದಿಸಿದರು. ಇದೇ ಸಂದರ್ಭದಲ್ಲಿ ಶ್ರೀಮಠದ ಹಳೆಯ ವೈದಿಕ ವಿದ್ಯಾರ್ಥಿಗಳಿಂದ ಪೀಠಾಧ್ಯಕ್ಷರ ತುಲಾಭಾರ ನೆರವೇರಿತು.

### ಪ್ರಾಣಿ-ಪಕ್ಷಿ, ಪ್ರಕೃತಿಯೊಂದಿಗೆ ಹಬ್ಬವನ್ನಾಚರಿಸಿ ಮುದಗೊಂಡ ಗದುಗಿನ ಜನತೆ

# ಸಂಕ್ರಾಂತಿ ಸಂಭ್ರಮಕ್ಕೆ ವೇದಿಕೆಯಾದ ಬಿಂಕದಕಟ್ಟಿ ಝೂ

■ವಿಜಯಸಾಕ್ಷಿ ಸುದ್ದಿ, ಗದಗ

ನೂತನ ವರ್ಷದ ಮೊದಲ ಹಬ್ಬ ಮಕರ ಸಂಕ್ರಮಣ ಬಂತೆದರೆ ಮುದ್ರಣ ಕಾಶಿ ಗದುಗಿನಲ್ಲಿ ಸಂಭ್ರಮ ಮುಗಿಲು ಮುಟ್ಟುತ್ತದೆ. ಸಾಲು ಸಾಲು ರಜೆ ಬಂತೆಂದರಂತೂ ಶಾಲಾ ಮಕ್ಕಳಿಗೆ, ನೌಕರ ವರ್ಗದವರಿಗೆ ರಜೆಯ ಮಜಾ ಅನುಭವಿಸುವ ಕಾತರ. ಈ ಹಬ್ಬದ ಸಂದರ್ಭದಲ್ಲಿ ಕುಟುಂಬ ಸಮೇತರಾಗಿ ಬಿಂಕದಕಟ್ಟಿ ಮೃಗಾಲಯ ಭೇಟಿ ನೀಡುವ ಸಂಪ್ರದಾಯ ಬೆಳೆಸಿಕೊಂಡು ಬಂದಿದ್ದಾರೆ.

ನಾಡಿನಾದ್ಯಂತ ಸಂಕ್ರಾಂತಿಯನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಆದರೆ ಗದುಗಿನಲ್ಲಿ ಮಾತ್ರ ಸಂಕ್ರಾಂತಿ ಹಬ್ಬವನ್ನು ಇನ್ನೂ ವಿಶೇಷವಾಗಿ ಆಚರಿಸಲಾಗುತ್ತಿದೆ. ಹಬ್ಬದ ಈ ಸಂಭ್ರಮದ ಘಳಿಗೆಯಲ್ಲಿ ಜಿಲ್ಲೆಯ ಸಾರ್ವಜನಿಕರು ಬಿಂಕದಕಟ್ಟಿ ಮೃಗಾಲಯಕ್ಕೆ ಕುಟುಂಬ ಸಮೇತರಾಗಿ ಭೇಟಿ ನೀಡಿ, ಮನೆಯಿಂದ ತಂದ ತರಹೆವಾರಿ ಅಡುಗೆ ಊಟ ಮಾಡಿ ಸಂಭ್ರಮದಿಂದ ಕಾಲ ಕಳೆದರು.

ಎಲ್ಲ ಪ್ರಾಣಿಗಳನ್ನು ನೋಡಿದ ಬಳಿಕ ಪಕ್ಕದಲ್ಲಿರುವ ಸಾಲುಮರದ ತಿಮ್ಮಕ್ಕ ಪಾರ್ಕ್‌ಗೆ ತೆರಳಿ, ಅಲ್ಲಿ ಜೋಕಾಲಿ ಸೀಸಾ, ಜಾರುಬಂಡಿ, ಸಾಹಸ ಕ್ರೀಡೆಗಳನ್ನು ಆಡಿ ಮೆರೆದರು. ಮಹಿಳೆಯರು, ಪುರುಷರು, ಮಕ್ಕಳು ವಿವಿಧ ಆಟಗಳನ್ನು ಆಡಿ ಖುಷಿಪಟ್ಟರು. ಸಿಂಹ, ಹುಲಿಗಳು ಘರ್ಜನೆಯ ಮೂಲಕ ಪ್ರಾಣಿ ಪ್ರಿಯರನ್ನು ರಂಜಿಸಿದರೆ, ಬಣ್ಣ ಬಣ್ಣದ ಪಕ್ಷಿಗಳು ಇಂಪಾದ ಧ್ವನಿಗಳ ಮೂಲಕ ಪ್ರಾಣಿ ಪ್ರಿಯರ ಮನ ತಣಿಸಿವೆ. ಉತ್ತರ ಕರ್ನಾಟಕ ಶೈಲಿಯ ಖಡಕ್ ಜೋಳದ ರೊಟ್ಟಿ, ಸಜ್ಜೆ ರೊಟ್ಟಿ, ಶೇಂಗಾ-ಎಳ್ಳು ಹೋಳಿಗೆ, ಬದನೆಕಾಯಿ-ಕಾಳು ಪಲ್ಯ ಇತ್ಯಾದಿ ಖಾದ್ಯಗಳನ್ನು ಮನೆಯಿಂದಲೇ ಸಿದ್ಧಪಡಿಸಿಕೊಂಡು ಬಂದು ಪಾರ್ಕ್‌ನಲ್ಲಿ ಕುಳಿತು ಊಟ ಮಾಡಿ ಸಂಭ್ರಮಿಸಿದರು.



ಈ ಹಿಂದೆ ಪ್ರಾಣಿ ಸಂಗ್ರಹಾಲಯದಲ್ಲಿ ಪ್ರಾಣಿಗಳೇ ಇಲ್ಲದೆ ಕಳೆಗುಂದಿತ್ತು. ಆದರೆ ಈಗ ಈ ಮೃಗಾಲಯ ಪ್ರಾಣಿಗಳಿಂದ ತುಂಬಿದೆ. ಉತ್ತರ ಕರ್ನಾಟಕದಲ್ಲಿ ಕಾಡು ಅಪರೂಪವಾಗಿದ್ದು, ಈ ಭಾಗದ ಜನರಿಗೆ ಸಿಂಹ, ಹುಲಿ, ಚಿರತೆ, ಕತ್ತೆಕಿರುಬ, ತೋಳಗಳು ಸೇರಿದಂತೆ ಹಲವಾರು ಪ್ರಾಣಿಗಳನ್ನು ವೀಕ್ಷಿಸುವುದೆಂದರೆ ಎಲ್ಲಿಲ್ಲದ ಕೂತೂಹಲ. ಹೀಗಾಗಿ ಬಿಂಕದಕಟ್ಟಿಯ ಪ್ರಾಣಿ ಸಂಗ್ರಹಾಲಯಕ್ಕೆ ಧಾರವಾಡ, ಹುಬ್ಬಳ್ಳಿ, ಹಾವೇರಿ, ಕೊಪ್ಪಳದಿಂದ ಸಾವಿರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಭೇಟಿ ನೀಡುತ್ತಿದ್ದಾರೆ.

▸▸3ನೇ ಪುಟಕ್ಕೆ

# ಜಿಲ್ಲಾಡಳಿತದಲ್ಲಿ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಂಗಳವಾರ ಬೆಳಿಗ್ಗೆ ಗದಗ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಕಾರ್ಯಕ್ರಮವನ್ನು ಸಾಂಕೇತಿಕವಾಗಿ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಯಿತು.

ತಾಲೂಕಾ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಕೃಷ್ಣಗೌಡ ಪಾಟೀಲ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಬಿ. ಸಂಕದ, ಉಪ ವಿಭಾಗಾಧಿಕಾರಿ ಗಂಗಪ್ಪ ಎಂ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ರವಿ ಗುಂಜಿಕರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಬಿ, ವಾರ್ತಾಧಿಕಾರಿ ವಸಂತ ಮಡ್ಲೂರ, ಆಂಜನೇಯ ಕಟಗಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಸಾರ್ವಜನಿಕರು ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.



# ಸಂಭ್ರಮದ ಅಗಸ್ತ್ಯತೀರ್ಥ ಜಾತ್ರಾ ಮಹೋತ್ಸವ




■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸಪ್ತಋಷಿಗಳಲ್ಲಿ ವೇದ ಮಹರ್ಷಿ ಅಗಸ್ತ್ಯ ಮುನಿಗಳು ಒಬ್ಬರಾಗಿದ್ದು, ಅಗಸ್ತ್ಯ ಮುನಿಗಳು ಇಲ್ಲಿಗೆ ಬಂದು ಶಿವಲಿಂಗವನ್ನು ಸ್ಥಾಪಿಸಿ, ತಪಸ್ಸು ಮಾಡಿದ್ದಾರೆಂದು ಪ್ರತೀತಿಯಿದೆ. ಅಗಸ್ತ್ಯತೀರ್ಥ ಕ್ಷೇತ್ರದಲ್ಲಿ ಸಂಕ್ರಾಂತಿಯಂದು ನಡೆಯುವ ಜಾತ್ರೆಯು ಮಂಗಳವಾರ ಸಾವಿರಾರು ಭಕ್ತರ ಉದ್ಘೋಷದ ನಡುವೆ ವಿಜೃಂಭಣೆಯಿಂದ ಜರುಗಿತು.

ಮಂಗಳವಾರ ಸಂಜೆ ಸಾವಿರಾರು ಭಕ್ತರ ಘೋಷಣೆಯ ಮಧ್ಯೆ ರಥೋತ್ಸವ ನಡೆಯಿತು. ಗ್ರಾಮೀಣ ಪ್ರದೇಶಗಳಿಂದ ಜಾತ್ರೆಗೆ ಆಗಮಿಸಿದ್ದ ಸಾವಿರಾರು ಭಕ್ತರು ತೇರಿಗೆ ಉತ್ತತ್ತಿ, ಬಾಳೆಹಣ್ಣುಗಳನ್ನು ಎಸೆದು ಭಕ್ತಿ ಮೆರೆದರು.

### ಅಲಂಕೃತಗೊಂಡ ಪಲ್ಲಕ್ಕಿಯಲ್ಲಿ ಶ್ರೀ ಗವಿಸಿದ್ಧೇಶ್ವರ ಮೂರ್ತಿಯ ತೆಪ್ಪವನ್ನೆಳೆದ ಭಕ್ತರು

# ಭಕ್ತಿಪೂರ್ಣ ತೆಪ್ಪೋತ್ಸವ ಸಂಪನ್ನ



■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಶ್ರೀ ಮಠದಿಂದ ಜರುಗುವ ಸಾಂಪ್ರದಾಯಿಕ ಕಾರ್ಯಕ್ರಮಗಳಲ್ಲೊಂದಾದ ತೆಪ್ಪೋತ್ಸವ ಹಾಗೂ ಸಂಗೀತ ಕಾರ್ಯಕ್ರಮವು ಕಾರ್ಯಕ್ರಮವು ಸೋಮವಾರ ಸಂಜೆ ಶ್ರೀ ಗವಿಮಠದ ಕೆರೆಯ ದಡದಲ್ಲಿ ಜರುಗಿತು.

ಜಾತ್ರಾ ಮಹೋತ್ಸವದಲ್ಲಿ ಕಣ್ಮನ ಸೆಳೆಯುವ ಉತ್ಸವ ತೆಪ್ಪೋತ್ಸವ. ತೆಪ್ಪೋತ್ಸವಕ್ಕೆ ಭಕ್ತರು ಆಗಮಿಸಿ ಮಹಾಮಹಿಮ ಕತೃ ಗವಿಶಿದ್ಧೇಶನನ್ನು ಸಂಕಲ್ಪ ಮಾಡಿಕೊಂಡರೆ ಇಷ್ಟಾರ್ಥ ಸಿದ್ಧಿಸುತ್ತದೆಂಬ ನಂಬಿಕೆ ಭಕ್ತಾದಿಗಳಲ್ಲಿದೆ. ತೆಪ್ಪೋತ್ಸವ ಎಂದರೆ ಬಾವಿ, ಕೆರೆ, ನದಿಗಳಲ್ಲಿ ತೆಪ್ಪದ ಮೇಲೆ ನಡೆಯುವ ದೇವರ ಉತ್ಸವವೆಂದು ಅರ್ಥ. ಎರಡು ತೆಪ್ಪಗಳ ನಡುವೆ ಹಲಗೆಯಿಂದ ನಿರ್ಮಿಸಲಾದ ವೇದಿಕೆಯಲ್ಲಿ ಶ್ರೀ ಗವಿಸಿದ್ದೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಅಲಂಕೃತಗೊಂಡ ಪಲ್ಲಕ್ಕಿಯಲ್ಲಿ ಶ್ರೀ ಗವಿಸಿದ್ಧೇಶ್ವರ ಮೂರ್ತಿಯನ್ನು ಮಂಗಳವಾದ್ಯಗಳೊಂದಿಗೆ ಕರೆ ತಂದು ಮೂಹೂರ್ತಗೊಳಿಸಿದ ತೆಪ್ಪವನ್ನು ನಾಲ್ಕು ದಿಕ್ಕುಗಳಲ್ಲಿ ಭಕ್ತಾಧಿಗಳು ಸಾಗಿಸುತ್ತಾರೆ.

▸▸3ನೇ ಪುಟಕ್ಕೆ

### ಶ್ರೀ ಶಿವಯೋಗಿ ಸಿದ್ಧರಾಮೇಶ್ವರರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಕೃಷ್ಣಗೌಡ ಪಾಟೀಲ

# ಕಾಯಕ, ದಾಸೋಹ ಭಾವ ಅಳವಡಿಸಿಕೊಳ್ಳಿ



■ವಿಜಯಸಾಕ್ಷಿ ಸುದ್ದಿ, ಗದಗ

ಸಮಸ್ತ ಭೋವಿ ಸಮಾಜ ಭಾಂದವರ ಆರಾಧ್ಯ ದೈವ ಶ್ರೀ ಶಿವಯೋಗಿ ಕಾಯಕಯೋಗಿ ಸಿದ್ದರಾಮೇಶ್ವರರ 852ನೇ ಜಯಂತ್ಯುತ್ಸವ ಕಾರ್ಯಕ್ರಮವನ್ನು ನಗರದ 30ನೇ ವಾರ್ಡಿನಲ್ಲಿರುವ ಶ್ರೀ ಸಿದ್ದರಾಮೇಶ್ವರ ದೇವಸ್ಥಾನದಲ್ಲಿ ಜ. 14ರಂದು ಬಸವ ದಳ ಮತ್ತು ತೋಂಟದಾರ್ಯ ಮಠದ ಸಹಯೋಗದಲ್ಲಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಯುವ ನಾಯಕ ಕೃಷ್ಣಗೌಡ ಎಚ್.ಪಾಟೀಲ, ಶಿವಯೋಗಿ ಸಿದ್ದರಾಮೇಶ್ವರರು ಜೀವನದಲ್ಲಿ ಅಳವಡಿಸಿಕೊಂಡಿದ್ದ ಕಾಯಕ, ದಾಸೋಹ ಭಾವವನ್ನು ನಿತ್ಯ ಜೀವನದಲ್ಲಿ ಅನುಸರಿಸಿದರೆ ಶರಣರ ಸಮೀಪಕ್ಕೆ ಯುವಕರು ಸಾಗಲು ಸಾಧ್ಯ ಎಂದರು.

ಇದೇ ಸಂದರ್ಭದಲ್ಲಿ ಸೇವಾ ರತ್ನ ಪ್ರಶಸ್ತಿಗೆ ಭಾಜನರಾದ ಪ್ರೊ. ಶಿವಾನಂದ್ ಪಟ್ಟಣಶೆಟ್ಟರರನ್ನು ಸನ್ಮಾನಿಸಿ ಗೌರವಿಸಲಾಯಿತು.

ಪ್ರಸ್ತಾವಿಕವಾಗಿ ಆಂಜನೇಯ ಕಟ್ಟಿಗೆ ಮಾತನಾಡಿ, ಯುವ ಮುಖಂಡರಾದ ಕೃಷ್ಣಗೌಡ ಪಾಟೀಲರು ಸಿದ್ದರಾಮೇಶ್ವರ ಮಹಾದ್ವಾರದ ಬಾಗಿಲಿಗೆ 10 ಲಕ್ಷ ರೂ ಅನುದಾನ ಬರುವ ಹಾಗೆ ಪ್ರಯತ್ನ ಮಾಡಿ ಸಮಾಜದ ಕೆಲಸಕ್ಕೆ ತಮ್ಮ ಸೇವೆಯನ್ನು ಸಲ್ಲಿಸಿರುವುದನ್ನು ಸ್ಮರಿಸಿದರು. ಲಿಂಗೈಕ್ಯ ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳಿಗೆ ಮತ್ತು ನಮ್ಮ ಸಮಾಜದ ಬಾಂಧವರಿಗೆ ಅವಿನಾಭಾವ ಸಂಬಂಧವಿದೆ. ಅದೇ ಪರಂಪರೆಯನ್ನು ಈಗಿನ ಶ್ರೀಗಳೊಂದಿಗೆ ಮುಂದುವರೆಯುತ್ತಾ ಶಿವಯೋಗಿ ಸಿದ್ದರಾಮೇಶ್ವರ ಕಾಯಕ, ಯೋಗ ಮತ್ತು ದಾಸೋಹ ಇವೆಲ್ಲಗಳನ್ನು ನಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ತಾ.ಪಂ ಮಾಜಿ ಅಧ್ಯಕ್ಷ ವಿದ್ಯಾಧರ್ ದೊಡ್ಡಮನಿ ಅಧ್ಯಕ್ಷತೆ ವಹಿಸಿದ್ದರು. ಸಿದ್ದರಾಮೇಶ್ವರ ದೇವಸ್ಥಾನ ಕಮಿಟಿಯ ಅಧ್ಯಕ್ಷ ನಾಗರೆಡ್ಡಿ ನಡುಗುಂದಿ, ಶಿವಾನಂದ್ ಪಟ್ಟಣಶೆಟ್ಟಿ, ಶೇಖಣ್ಣ ಕವಳಿಕಾಯಿ, ಮುಗದ್ ಅಸೂಟಿ, ಶ್ರೀನಿವಾಸ್ ಭಂಡಾರಿ, ರವಿ ಕೋಟಿ, ಸಹದೇವ್, ನಾಗಪ್ಪ ಹನುಮಂತಪ್ಪ ನಿಡುಗುಂದಿ, ಜಗದೀಶ್, ದೇವು ತಿಮ್ಮರೆಡ್ಡಿ, ಗಾಲಪ್ಪ ವಡ್ಡರ್, ಷಣ್ಮುಖಪ್ಪ, ರಾಮು ಕಾಳಗಿ ಹಾಗೂ ಸಮಸ್ತ ಭೋವಿ ಸಮಾಜ ಭಾಂದವರು ಉಪಸ್ಥಿತರಿದ್ದರು.

### ಪ್ರಯಾಗ್‌ರಾಜ್ ಮಹಾ ಕುಂಭಮೇಳಕ್ಕೆ ಗದುಗಿನ ಪ್ರವಾಸಿಗರ ತಂಡ

# ಸನ್ಮಾರ್ಗದಲ್ಲಿ ಮುನ್ನಡೆಯಲು ಯಾತ್ರೆಗಳು ಪೂರಕ

■ವಿಜಯಸಾಕ್ಷಿ ಸುದ್ದಿ, ಗದಗ

ಪ್ರಯಾಗ್‌ರಾಜ್‌ನಲ್ಲಿ ನಡೆದಿರುವ ಕುಂಭಮೇಳ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಸಮ್ಮಿಲನವಾಗಿದೆ. ಕುಂಭಮೇಳದಲ್ಲಿ ಪಾಲ್ಗೊಳ್ಳುವದು, ಪುಣ್ಯಸ್ನಾನ ಮಾಡುವದು ಮನುಷ್ಯನನ್ನು ಸನ್ಮಾರ್ಗದೆಡೆಗೆ ಮುನ್ನಡೆಸುವ ಪುಣ್ಯಪ್ರಾಪ್ತಿಯ ಕಾರ್ಯವಾಗಿದೆ ಎಂದು ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಹುಬ್ಬಳ್ಳಿ ಅಧ್ಯಕ್ಷ ಪಿ.ಎಸ್. ಸಂಶಿಮಠ ಹೇಳಿದರು.

ಅವರು ಮಂಗಳವಾರ ಗದುಗಿನಿಂದ ಪ್ರಯಾಗ್‌ರಾಜ್ ಕುಂಭಮೇಳಕ್ಕೆ ತೆರಳುತ್ತಿರುವ ಯಾತ್ರಾರ್ಥಿಗಳಿಗೆ ಭೋಜನಕೂಟ ಏರ್ಪಡಿಸಿ ಸನ್ಮಾನಿಸಿ ಬೀಳ್ಕೊಡುವ ಸಮಾರಂಭದಲ್ಲಿ ಮಾತನಾಡಿದರು.

ನಾವಿಂದು ವ್ಯಾಪಾರ, ವಹಿವಾಟುಗಳ ಮಧ್ಯದಲ್ಲಿ ಒತ್ತಡದ ಜೀವನ ನಡೆಸುವಂತಾಗಿದೆ. ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯದಲ್ಲಿ ಪಾಲ್ಗೊಂಡು ಒತ್ತಡಗಳನ್ನು ನಿಗ್ರಹಿಸಿಕೊಳ್ಳುವ ಕಾರ್ಯಕ್ಕೆ ಮುಂದಾಗಬೇಕು.



ಈ ನಿಟ್ಟಿನಲ್ಲಿ ಗದಗ ಎಪಿಎಂಸಿ ಮಾರುಕಟ್ಟೆಯ ವ್ಯಾಪಾರಸ್ಥರು, ವಾಯು ವಿಹಾರ ಸಂಘದವರು, ಸಮಾನಮನಸ್ಕರರು ಒಂದುಗೂಡಿ ಜ. 13ರಿಂದ ಫೆ. 28ರವರೆಗೆ ಪ್ರಯಾಗ್‌ರಾಜ್‌ನಲ್ಲಿ ನಡೆಯಲಿರುವ ಕುಂಭಮೇಳ ಧಾರ್ಮಿಕ, ಆಧ್ಯಾತ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಗಣ್ಯ ವ್ಯಾಪಾರಸ್ಥರಾದ ಸದಾಶಿವಯ್ಯ ಮದರಿಮಠ ಅವರ ನೇತೃತ್ವದಲ್ಲಿ ಕೈಗೊಂಡಿರುವ ಯಾತ್ರೆಗೆ ಶುಭ ಕೋರಿದರು.

ಸದಾಶಿವಯ್ಯ ಮದರಿಮಠ, ಗುರುಬಸವಲಿಂಗ ತಡಸದ, ವಿನೋದ ಭಾಂಡಗೆ, ವಿನಾಯಕ ಪಾಟೀಲ, ಸಂತೋಷ ಭಾಂಡಗೆ, ಬಸವರಾಜ ಹಿರೇಮಠ, ಕಿರಣ ಭಾಂಡಗೆ, ಮೋತಿಲಾಲ ಭಾಂಡಗೆ, ಮುರುಘರಾಜೇಂದ್ರ ಬಡ್ನಿ, ಪರಶುರಾಮ ಖಟವಟೆ, ಮಂಜುನಾಥಗೌಡ ಬೆಂತೂರ, ಗಂಗಾಧರ ಗೊಡಚಿ, ಮಹೇಶ ತೇಲಿ, ಚಂದ್ರಗೌಡ ಪರ್ವತಗೌಡ್ರ, ವಿ.ಕೆ. ಗುರುಮಠ, ವಿಕಾಸ ಚವ್ಹಾಣ, ಶರಣಬಸಪ್ಪ ಗುಡಿಮನಿ, ಚಂದ್ರಶೇಖರ ತಡಸದ, ರಾಜು ಕುರುಡಗಿ, ದೇವಣ್ಣ ಡಾವಣಗೇರಿ, ಮಲ್ಲಿಕಾರ್ಜುನ ಚಂದಪ್ಪನವರ, ಅನಿಲ್ ತೆಂಬದಮನಿ, ಸುನೀಲ ತೆಂಬದಮನಿ, ಸಂತೋಷ ಮೇಲಗಿರಿ, ಸಮೀರ ಕುಲಕರ್ಣಿ, ಗಂಗಾಧರ ನವಲಗುಂದ, ಮಹಾದೇವ ಕಲಬುರ್ಗಿ, ಮಂಜುನಾಥ ಬೇಲೇರಿ, ವಿಶ್ವನಾಥ ಶೆಟ್ಟಿ, ದತ್ತುಸಾ ಬೇವಿನಕಟ್ಟಿ, ಲಿಂಗರಾಜ ಚಂದಪ್ಪನವರ, ಬಸವರಾಜ ಹಡಪದ, ಪರಶುರಾಮ ನಾಯ್ಕರ, ಶ್ರೀಕಾಂತಯ್ಯ ಉಣ್ಣಿಮಠ, ಕೆ.ವ್ಹಿ.ಪಾಟೀಲ, ರಾಜು ಕಂಟಿಗೊಣ್ಣನವರ, ಹೇಮಂತ ಕುಲಕರ್ಣಿ, ಮಲ್ಲೇಶ ಅಣ್ಣಿಗೇರಿ, ವಿನಾಯಕ ಓಲೇಕಾರ, ಕಿರಣ ಛಲವಾದಿ, ವೀರೇಶ ಕೂಗು, ಅಂಬಾಸಾ ಭಾಂಡಗೆ, ರಾಮನಗೌಡ ದಾನಪ್ಪಗೌಡ್ರ, ಶರಣಪ್ಪ ಗೋಗೇರಿ, ಕೊಟ್ರೇಶ್ವರ ವಿಭೂತಿ, ಚಂದ್ರಕಾಂತ ಹಾನಗಲ್, ಪ್ರಕಾಶ ಬದಿ, ರಾಘವೇಂದ್ರ, ಅಂಬಾಸಾ ಖಟವಟೆ, ಮಾಧುಸಾ ಬದಿ ಮುಂತಾದವರು ಖಾಸಗಿ ವಾಹನದಲ್ಲಿ ಹಾಗೂ ರೈಲ್ವೇ ಮೂಲಕ ಪ್ರವಾಸ ಆರಂಭಿಸಿ ವಿಮಾನದ ಮೂಲಕ ಕಾಶೀ, ಪ್ರಯಾಗ್‌ರಾಜ್ ತಲುಪಲಿದ್ದಾರೆ.

ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಮಾಜಿ ಅಧ್ಯಕ್ಷ ಚಂದ್ರು ಬಾಳಿಹಳ್ಳಿಮಠ ಮಾತನಾಡಿ, 144 ವರ್ಷಗಳಿಗೊಮ್ಮೆ ಬರುವ ಮಹಾ ಕುಂಭಮೇಳವು ಗಂಗಾ, ಯಮುನಾ, ಸರಸ್ವತಿ, ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡುವ ಸಂಕಲ್ಪವಿದ್ದು, ದೇಶ ನೋಡು-ಕೋಶ ಓದು ಎನ್ನುವಂತೆ ಧಾರ್ಮಿಕ ಪ್ರವಾಸ ಕೈಗೊಂಡಿರುವ ಈ ಯಾತ್ರಾರ್ಥಿಗಳು ಇನ್ನಷ್ಟು ಧಾರ್ಮಿಕ ಆಚಾರ ವಿಚಾರಗಳನ್ನು, ಸಂಸ್ಕೃತಿಯನ್ನು ವೃದ್ಧಿಸಿಕೊಂಡು ಬರಲಿ ಎಂದರು.

# ಶ್ರೀ ಗವಿಸಿದ್ಧೇಶ್ವರ ಉತ್ಸವ ಮೂರ್ತಿಯ ಮೆರವಣಿಗೆ








■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ


ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಉತ್ಸವ ಮೂರ್ತಿಯ ಮೆರವಣಿಗೆಯು ಮಂಗಳವಾರ ಸಾಯಂಕಾಲ 5 ಗಂಟೆಗೆ ಆರಂಭಗೊಂಡು ಸಂಜೆ ಶ್ರೀ ಗವಿಮಠ ತಲುಪಿತು. ಜಡೇಗೌಡರ ಮನೆಯಿಂದ ಪ್ರಾರಂಭಗೊಂಡು ಕೋಟೆ ಮಠದಿಂದ ಪಲ್ಲಕ್ಕಿ ಹೊರಟು ಗಡಿಯಾರ ಕಂಬ ವೃತ್ತದಲ್ಲಿ, ಮುದ್ದಾಬಳ್ಳಿಯಿಂದ ಬರುವ ಶ್ರೀ ಗವಿಸಿದ್ಧೇಶ್ವರ ಉತ್ಸವ ಮೂರ್ತಿಯು, ಹಲಗೇರಿ ಗ್ರಾಮದ ಸದ್ಭಕ್ತರಾದ ಲಿಂ.ಶ್ರೀ ವೀರನಗೌಡರು ಪಾಟೀಲ ಮತ್ತು ಧರ್ಮಪತ್ನಿ ಶ್ರೀಮತಿ ಗಿರಿಜಮ್ಮ ಪಾಟೀಲರ ಮನೆಯಿಂದ ಬರುವ ಕಳಸ ಹಾಗೂ ಮಂಗಳಾಪೂರದಿಂದ ಬರುವ ಶ್ರೀ ಗವಿಸಿದ್ಧೇಶ್ವರ ಉತ್ಸವ ಮೂರ್ತಿಯು ಜವಾಹರ್ ರಸ್ತೆಯಲ್ಲಿ ಕೂಡಿಕೊಂಡು ಕಿತ್ತೂರು ರಾಣಿ ಚೆನ್ನಮ್ಮ ಸರ್ಕಲ್, ಕವಲೂರು ಓಣಿ, ಸಿದ್ಧೇಶ್ವರ ವೃತ್ತದ ಗವಿಶ್ರೀ ನಗರದ 3ನೇ ಮುಖ್ಯರಸ್ತೆ ಮೂಲಕ ಭವ್ಯ ಮೆರವಣಿಗೆ ಜರುಗಿತು.

ಮೆರವಣಿಗೆಯ ಸಂದರ್ಭದಲ್ಲಿ ನಂದಿಕೋಲು, ಡೊಳ್ಳು, ಭಜನೆ, ಭಾಜಾ-ಭಜಂತ್ರಿ, ಪಂಜು, ಇಲಾಲು ಹಾಗೂ ನಾಡಿನ ವೈಭವವನ್ನು ಬಿಂಬಿಸುವ ಅನೇಕ ಜಾನಪದ ವಿಶೇಷ ಕಲಾ ತಂಡಗಳು ಭಾಗವಹಿಸಿ ಮೆರವಣಿಗೆಗೆ ಮೆರಗು ತಂದವು. ಮೆರವಣಿಗೆಯಲ್ಲಿ ಸಹಸ್ರಾರು ಸದ್ಭಕ್ತರು ಹಾಗೂ ಗೌಡರ ಮನೆತನದವರು ಪಾಲ್ಗೊಂಡಿದ್ದರು.









ರೋಣದ ಶರಣ ಶಿಕ್ಷಣ ಸಮಿತಿ 8ನೇ ತರಗತಿ ವಿದ್ಯಾರ್ಥಿ ವೈಭವ ಬಸವರಾಜ ಸಂಗನಬಶೆಟ್ಟರ ರಾಜ್ಯ ಮಟ್ಟದ ಚೆಸ್ ಸ್ಪರ್ಧೆಯಲ್ಲಿ ವಿಜಯಶಾಲಿಯಾಗುವ ಮೂಲಕ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ. ವಿದ್ಯಾರ್ಥಿಯ ಸಾಧನೆಗೆ ಬಿಇಓ ರುದ್ರಪ್ಪ ಹುರಳಿ, ಡಾ. ಎಸ್.ಬಿ. ಲಕ್ಕೋಳ ಸೇರಿದಂತೆ ಶಿಕ್ಷಣ ಸಮಿತಿ ನಿರ್ದೇಶಕರು, ಶಿಕ್ಷಕರು, ಸಿಬ್ಬಂದಿಗಳು ಪ್ರಸಂಶೆ ವ್ಯಕ್ತಪಡಿಸಿದ್ದಾರೆ.

## ಅಪ್ರಾಪ್ತ ಬಾಲಕಿಯ ಮೇಲೆ ದೌರ್ಜನ್ಯ ಆರೋಪ: ಬಿಜೆಪಿ ನಾಯಕನ ಬಂಧನ

■ ವಿಜಯಸಾಕ್ಷಿ ಸುದ್ದಿ, ತಮಿಳುನಾಡು

15 ವರ್ಷದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ತಮಿಳುನಾಡು ಬಿಜೆಪಿ ರಾಜ್ಯ ಆರ್ಥಿಕ ವಿಭಾಗದ ಮಧುರೈ ಮುಖ್ಯಸ್ಥ ಎಂ.ಎಸ್.ಷಾ ಅವರನ್ನು ಜನವರಿ 13 ರಂದು ಬಂಧಿಸಲಾಯಿತು.



ಬಾಲಕಿಯ ತಂದೆ ನಗರ ಮಹಿಳಾ ಪೊಲೀಸ್ ಠಾಣೆಯಲ್ಲಿ ಸಲ್ಲಿಸಿದ ದೂರಿನ ಮೇರೆಗೆ ಈ ಬಂಧನ ನಡೆದಿದೆ. ಪ್ರಕರಣದ ಸುತ್ತಲಿನ ದು-ಃಖಕರ ಸಂದರ್ಭಗಳನ್ನು ಅವರು ವಿವರಿಸಿದ್ದಾರೆ. ಆರೋಪಿ ತಿರುಮಂಗಲಂನಲ್ಲಿ ಖಾಸಗಿ ಕಾಲೇಜನ್ನು ಸಹ ನಡೆಸುತ್ತಿದ್ದಾರೆ.

ಸಂತ್ರಸ್ತೆ ತಂದೆಯ ಹೇಳಿಕೆಯ ಪ್ರಕಾರ, ಅವರು ತಮ್ಮ ಮಗಳ ಫೋನ್‌ನಲ್ಲಿ ಅನುಚಿತ ಸಂದೇಶಗಳನ್ನು ನೋಡಿದ್ದು, ಅದು ಅವರಲ್ಲಿ ಮತ್ತಷ್ಟು ಅನುಮಾನಗಳಿಗೆ ಕಾರಣವಾಯಿತು. ಷಾ ತನ್ನನ್ನು ತನ್ನ ನಿವಾಸಕ್ಕೆ ಕರೆದೊಯ್ದು ತನ್ನ ಮೇಲೆ ಹಲ್ಲೆ ನಡೆಸಿದ್ದಾನೆ ಎಂದು ಹುಡುಗಿ ಬಹಿರಂಗಪಡಿಸಿದ್ದಾಳೆ. ಬಾಲಕಿಗೆ ದ್ವಿಚಕ್ರ ವಾಹನವನ್ನು ಖರೀದಿಸುವುದಾಗಿ ಭರವಸೆ ನೀಡಿದ್ದಾನೆ ಎಂದು ಆರೋಪಿಸಲಾಗಿದೆ.

### ದಕ್ಷಿಣ ಭಾರತದ ಕುಂಭಮೇಳವೆಂದೇ ಪ್ರಖ್ಯಾತ ಗವಿಮಠದ ಜಾತ್ರೆಯ ನಿಮಿತ್ತ ಲೇಖನ

## ವೈಚಾರಿಕ ಅರಿವು ಬೆಳೆಸುವ ಜಾತ್ರಾ ಮಹೋತ್ಸವ

ಜೀವನದ ಪ್ರತಿ ಘಳಿಗೆಯೂ ಅಮೂಲ್ಯವೇ. ಎದುರಾಗುವ ಪ್ರತಿ ಘಟನೆಯೂ ಒಂದು ಅನುಭವವೇ. ಒಂದೊಂದು ಸವಾಲೂ ಒಂದೊಂದು ಪಾಠವೇ. ಹಾಗಾಗಿ ಅವುಗಳನ್ನು ಪ್ರೀತಿಯಿಂದ ಸ್ವೀಕರಿಸುವ ಮನೋಭಾವ ರೂಢಿಸಿಕೊಳ್ಳುವುದು ಉತ್ತಮ. ಹಾಗೆ ಮಾಡಿದಾಗಲೇ ಬದುಕು ನಿಣಜಿಥಿಔತ್ಸವ. ಇಲ್ಲವಾದರೆ ಬರೀ ಸಂತೆ. ಈ ನುಡಿ ಕೇಳಿದಾಕ್ಷಣ ನಮ್ಮ ಕಣ್ಣ ಮುಂದೆ ಬರುವದು ಕೊಪ್ಪಳದ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಗಳು.

ಹಳೇ ಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು ಎನ್ನುವ ಹಾಗೆ ಶ್ರೀ ಮ.ನಿ.ಪ್ರ.ಸ್ವರೂಪಿ ಶಿವಶಾಂತವೀರ ಗುರುಗಳ ಆಶೀರ್ವಾದದಿಂದ ಅವರ ಪರಮ ಶಿಷ್ಯರಾದ ಪೂಜ್ಯ ಅಭಿನವ ಗವಿಸಿದ್ಧೇಶ್ವರರು ತಾತ್ವಿಕ ವಿಚಾರಗಳನ್ನು ಸನಾತನ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ಕಲಿತು ವೇದಾಧ್ಯಯನ, ತತ್ವಜ್ಞಾನ ಮತ್ತು ಆಧುನಿಕ ವಿದ್ಯೆಗಳ ಸಂಗಮವಾಗಿ ಇಂದು ನಮ್ಮೆಲ್ಲರ ಹೆಮ್ಮೆಯ ಗುರುಗಳಾಗಿದ್ದಾರೆ. ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಕೊಪ್ಪಳ ಹಾಗೂ ಕೊಪ್ಪಳ ನಾಡಿಗೆ ಮಹತ್ವದ ಸ್ಥಾನವಿದೆ. ಕೊಪ್ಪಳದ ಗವಿಮಠಕ್ಕೆ ಸಹಸ್ರಾರು ವರ್ಷಗಳ ಇತಿಹಾಸವಿದೆ. ಅನೇಕ ಐತಿಹ್ಯಗಳನ್ನು ತನ್ನ ಒಡಲಾಳದಲ್ಲಿ ಸಮಸ್ತ ಜೀವಿಗಳಿಗೆ ಹರಸುತ್ತಾ ಸರ್ವಧರ್ಮ ಸಮನ್ವಯದ ಸಂಕೇತ ಮತ್ತು ಪ್ರತೀಕವಾಗಿ ನಗರದ ಪೂರ್ವ ಬೆಟ್ಟದಲ್ಲಿ ಅಚಲವಾಗಿ ನೆಲೆ ನಿಂತಿರುವದೇ ಸಂಸ್ಥಾನ ಗವಿಮಠ. ಈ ನಾಡಿನ ಬದುಕಿಗೆ ಮಾರ್ಗದರ್ಶನ ನೀಡುತ್ತಾ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದ ಹಾಗೂ ಶ್ರಮಿಸುತ್ತಲಿರುವ ಶ್ರೀ ಗವಿಮಠದ ಎಲ್ಲಾ ಗುರುಗಳು ಅಕ್ಷರಶಹ ಪರಮ ಪೂಜ್ಯರು ಹಾಗೂ ಪ್ರಾತಃಸ್ಮರಣೀಯರಾಗಿದ್ದಾರೆ.

ಸಮಾಜದ ಬಗೆಗೆ ಅತ್ಯಂತ ಕಳಕಳಿಯಿರುವ ಅಭಿನವ ಶ್ರೀಗಳು ಅನೇಕ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ಬಂದಿರುವದು ನಮಗೆಲ್ಲರಿಗೂ ತಿಳಿದಿರುವ ವಿಷಯವೇ ಆಗಿದ್ದು, ಈಗಾಗಲೇ 2000 ಬಡ ವಿದ್ಯಾರ್ಥಿಗಳಿಗೆ ಉಚಿತ ವಸತಿನಿಲಯದ ವ್ಯವಸ್ಥೆ ಮಾಡಿದ್ದರು. ಅದು ಈಗ 5 ಸಾವಿರಕ್ಕೆ ಬೆಳೆದಿದ್ದು, ಇದರಿಂದ ಶ್ರೀಗಳ ಸಾಮಾಜಿಕ ಮತ್ತು ಶಿಕ್ಷಣದ ಕುರಿತಾಗಿ ಇರುವ ಕಾಳಜಿಯನ್ನು ಅರಿತುಕೊಳ್ಳಬಹುದಾಗಿದೆ.

ಜಾತ್ರೆಯೆಂದರೆ ಭಕ್ತರಿಗೆ ಕೇವಲ ಉತ್ಸವ ಅಥವಾ ಬಿಡುವಿನ ಸಮಯದ ಮನರಂಜನೆ ಅಲ್ಲ. ಇಲ್ಲಿ ಪ್ರತಿಯೊಬ್ಬರಿಗೆ ವೈಚಾರಿಕ ಅರಿವನ್ನು ಬೆಳೆಸುವದಗೆಕ್ಕಾಗಿ ಗವಿಮಠದ ಜಾತ್ರಾ ಮಹೋತ್ಸವದಲ್ಲಿ ಪ್ರತಿವರ್ಷ ಒಂದೊಂದು ಸಾಮಾಜಿಕ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುವ ಹಮ್ಮಿಕೊಳ್ಳಲಾಗುತ್ತಿದೆ. ಈ ವರ್ಷ 11-01-2025 ರಂದು ಸಕಲಚೇತನ ಜಾಥಾದಲ್ಲಿ ಶಾಲಾ ಮಕ್ಕಳು ಪಾಲ್ಗೊಂಡು ಯಶಸ್ವಿಯಾಗಿಸಿದ್ದಾರೆ.

ಪ್ರಸ್ತುತ 18ನೇ ಪೀಠಾಧಿಪತಿಗಳಾದ ಅಭಿನವ ಗವಿಸಿದ್ಧೇಶ್ವರ ಶಿವಯೋಗಿಗಳು ಕೊಪ್ಪಳದ ಭಾಗದಲ್ಲಿ ನಡೆದಾಡುವ ದೇವರೆಂದೇ ಹೆಸರಾದವರು. ಜಾತ್ರೆಯ ಅರ್ಥಕ್ಕೆ ಹೊಸ ವಾಖ್ಯಾನ ಬರೆದ ಸಾರ್ವಭೌಮರು. ಹಿಂದುಳಿದ ಕ್ಷೇತ್ರವೆಂದೇ ಹೆಸರು ಪಡೆದ ಕೊಪ್ಪಳದ ಮುನ್ನಡೆಗೆ ಮುನ್ನುಡಿ ಬರೆದ ಶ್ರಮ ಸಂಸ್ಕೃತಿ ಅವರದು. ಸಕಲ ಜೀವಾತ್ಮರಿಗೂ ಲೇಸನ್ನು ಬಯಸುವ ದಯಾಘನರು. ಇಂತಹ ಬಹುಮುಖ ವ್ಯಕ್ತಿತ್ವ ದವರು ಕ್ರೀಡೆ, ಆರೋಗ್ಯ, ಕೃಷಿ, ಜಲ,ಜೀವನವನ್ನು ಕಟ್ಟಿಕೊಳ್ಳುವ ಬಗೆ ಹಾಗೂ ಧಾರ್ಮಿಕ ಕುರಿತಾಗಿ ಜನರಲ್ಲಿ ವೈಚಾರಿಕತೆಯನ್ನು ಬೆಳೆಸುವಲ್ಲಿ ಮೊದಲಿಗರಾಗಿದ್ದಾರೆ.

ಅಭಿನವ ಗವಿಸಿದ್ಧೇಶ್ವರರು 13-12-2002ರಿಂದ ಶ್ರೀ ಮಠಕ್ಕೆ 18ನೇ ಪೀಠಾಧಿಪತಿಗಳಾಗಿದ್ದು ಅಂದಿನಿಂದ ವರ್ಷದಿಂದ ವರ್ಷಕ್ಕೆ ಜಾತ್ರೆಯ ವಾಖ್ಯಾನಕ್ಕೆ ಹೊಸ ಹೊಸ ಆಯಾಮಗಳನ್ನು ನೀಡುತ್ತಾ ಬಂದಿರುವರು. ಏನೆಲ್ಲಾ ಕಾರ್ಯ ಮಾಡಿದರೂ ಅದು ಗವಿಸಿದ್ಧನ ಹಾಗೂ ಮೊದಲಿನ ಎಲ್ಲಾ ಶಿವಯೋಗಿಗಳ ತಪಸ್ಸಿನ ಶಕ್ತಿ ಹಾಗೂ ಆಶೀರ್ವಾದದ ಕೃಪೆ ಎಂದು ಹೇಳುವರು ಮಹಾ ಮಹಿಮ, ಸರಳ ವ್ಯಕ್ತಿತ್ವದ ಪೂಜ್ಯ ಅಭಿನವ ಗವಿಶ್ರೀಗಳು. ನಿರಹಂಭಾವಿಗಳಾಗಿ ಮಠದ ಸರ್ವಾಂಗೀಣ ಅಭಿವೃದ್ಧಿಗೆ ಗಡಿಯಾರದ ಮುಳ್ಳಿನಂತೆ ದಣಿವಿಲ್ಲದೆ ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸುತಿದ್ದಾರೆ. ಇಂದಿನ ಯುವ ಸಮೂಹಕ್ಕೆ ಆದರ್ಶ ಮಾದರಿಯಾಗಿದ್ದಾರೆ.

ಅನ್ನ, ಅಕ್ಷರ ಮತ್ತು ಆಧ್ಯಾತ್ಮಿಕ ದಾಸೋಹದ ಮೂಲಕ ನಾಡಿನೂದ್ದಕ್ಕೂ ಜಾತಿ, ಮತ, ಪಂಥ ಎಂಬ ಯಾವ ಬೇಧವಿಲ್ಲದೆ ಸಮಸ್ತ ಭಕ್ತಸಮಸ್ಥಲವನ್ನು ಉದ್ಧರಿಸುತ್ತಾ ಶ್ರೀ ಗವಿಮಠವು ಮುನ್ನಡೆಯುತ್ತಿದೆ. ಪ್ರತಿ ವರ್ಷದಂತೆ ಈ ವರ್ಷದ ಜಾತ್ರೆಯಲ್ಲಿಯೂ ಹಲವಾರು ಕ್ರೀಡಾ ಸ್ವರ್ಧೆಗಳನ್ನು ಮತ್ತು ಪ್ರಬಂಧ ಹಾಗೂ ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಿದ್ದು, ಜಾತ್ರೆಯಲ್ಲಿಯೂ ಕೂಡ ಹಲವಾರು ಗ್ರಾಮೀಣ ಕ್ರೀಡಾ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.



ದಕ್ಷಿಣ ಭಾರತದ ಕುಂಭಮೇಳ ಎಂದು ಪ್ರಖ್ಯಾತಿ ಪಡೆದಿರುವ ಗವಿಮಠದ ಜಾತ್ರೆಯ ರಥೋತ್ಸವವು ಈ ವರ್ಷದ 15-01-2025 ಬುಧವಾರದಂಂದು ಜರುಗಲಿದ್ದು, ಬನ್ನಿ ಎಲ್ಲರೂ ಈ ಅವಿಸ್ಮರಣೀಯ ಪರಂಪರೆಗೆ ಸಾಕ್ಷಿಯಾಗೋಣ.

– ಗಂಗಾಧರ ಸೊಪ್ಪಿಮಠ, ಕೊಪ್ಪಳ.

# ರಾಷ್ಟ್ರೀಯ ಚುನಾವಣೆಗಳಿಗೆ ಮಾತ್ರ ಇಂಡಿಯಾ ಮೈತ್ರಿ

■ವಿಜಯಸಾಕ್ಷಿ ಸುದ್ದಿ, ಮುಂಬೈ



ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಅವರ ಪಕ್ಷವು, ಶಿವಸೇನೆಯ ಉದ್ಧವ್ ಬಣದ ಹೆಜ್ಜೆಗಳನ್ನು ಅನುಸರಿಸಿ ಮುಂಬೈ ನಾಗರಿಕ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವ ಸಾಧ್ಯತೆಯಿದೆ ಎಂದು ಸುಳಿವು ನೀಡಿದ್ದಾರೆ.

ಪವಾರ್ ಅವರ ಈ ಹೇಳಿಕೆ ಮಹಾ ವಿಕಾಸ್ ಅಘಾಡಿ (ಎಂವಿಎ) ಯಲ್ಲಿನ ಬಿರುಕು ಎಂಬ ವದಂತಿಗಳಿಗೆ ಮತ್ತಷ್ಟು ಬಲ ತುಂಬಿದೆ. ಮುಂಬೈನಲ್ಲಿ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ಪವಾರ್, ಇಂಡಿಯಾ ಬಣವನ್ನು ರಾಷ್ಟ್ರೀಯ ಮಟ್ಟದ ಚುನಾವಣೆಗಳಿಗಾಗಿ ಮಾತ್ರ ರಚಿಸಲಾಗಿದೆ. ಪುರಸಭೆ ಅಥವಾ ರಾಜ್ಯ ಚುನಾವಣೆಗಳಲ್ಲಿ ಒಟ್ಟಿಗೆ ಸ್ಪರ್ಧೆ ಮಾಡುವ ಬಗ್ಗೆ ಏನೂ ಚರ್ಚಿಸಲಾಗಿಲ್ಲ ಎಂದು ಹೇಳಿದರು.

"ಇಂಡಿಯಾ ರಂಗ ರಚನೆಯಾದಾಗ, ಚರ್ಚೆ ರಾಷ್ಟ್ರೀಯ ಸಮಸ್ಯೆಗಳು ಮತ್ತು ಚುನಾವಣೆಗಳ ಬಗ್ಗೆ ಮಾತ್ರ. ಸ್ಥಳೀಯ ಸಂಸ್ಥೆ ಚುನಾವಣೆ ಅಥವಾ ರಾಜ್ಯ ಚುನಾವಣೆಗಳ ಬಗ್ಗೆ ಯಾವುದೇ ಚರ್ಚೆ ಇರಲಿಲ್ಲ" ಎಂದು ಪವಾರ್ ಹೇಳಿದರು.

ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಪಕ್ಷಗಳು ಒಟ್ಟಾಗಿ ಅಥವಾ ಏಕಾಂಗಿಯಾಗಿ ಸ್ಪರ್ಧಿಸುತ್ತವೆಯೇ ಎಂದು ನಿರ್ಧರಿಸಲು ಎಂವಿಎ ಘಟಕಗಳ ನಡುವೆ ಸಭೆ ನಡೆಸಲಾಗುವುದು ಎಂದು ಹಿರಿಯ ನಾಯಕ ಹೇಳಿದರು. "ಮಹಾರಾಷ್ಟ್ರದಲ್ಲಿ ಮುಂಬರುವ ಪುರಸಭೆ ಚುನಾವಣೆಯಲ್ಲಿ, ನಾವು ಒಟ್ಟಾಗಿ ಅಥವಾ ಏಕಾಂಗಿಯಾಗಿ ಹೋರಾಡುತ್ತೇವೆಯೇ ಎಂದು ಎಲ್ಲರೂ 8–10 ದಿನಗಳಲ್ಲಿ ಸಭೆ ನಡೆಸುವ ಮೂಲಕ ನಿರ್ಧರಿಸುತ್ತೇವೆ.

### ಶ್ರೀ ಗುರು ಸಿದ್ದರಾಮೇಶ್ವರರ 852ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಬಸವರಾಜ ಬೊಮ್ಮಾಯಿ

# ಕಾಯಕ ಸಮಾಜಕ್ಕೆ ಎಂದೂ ಬಡತನವಿಲ್ಲ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು



ಶರಣ ಶ್ರೀ ಸಿದ್ದರಾಮೇಶ್ವರರು ಕಾಯಕದ ಮೂಲಕ ಪವಾಡ ಸೃಷ್ಟಿಸಿದವರು. ಕಾಯಕ ಮಾಡುವವರಿಗೆ ಯಾವತ್ತೂ ಬಡತನ ಬರುವುದಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಮಂಗಳವಾರ ಬೆಂಗಳೂರಿನ ಅರಮನೆ ಮೈದಾನದಲ್ಲಿ ನೊಳಂಬ ಲಿಂಗಾಯತ ಸಂಘ ಏರ್ಪಡಿಸಿದ್ದ ಶ್ರೀ ಗುರು ಸಿದ್ದರಾಮೇಶ್ವರರ 852ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಸಾಹಿತ್ಯಗೋಷ್ಠಿ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮದು ದಿವ್ಯ ಪರಂಪರೆ ಹೊಂದಿರುವ ಸಮಾಜ. 12ನೇ ಶತಮಾನದಲ್ಲಿ ಹಲವಾರು ಶರಣರನ್ನು ಸೃಷ್ಟಿಸಿದ ಶ್ರೇಷ್ಠ ಕ್ರಾಂತಿಯಲ್ಲಿ ವಿಭಿನ್ನರಾದವರು ಶ್ರೀ ಸಿದ್ದರಾಮೇಶ್ವರ ಶರಣರು, ಬಸವಣ್ಣನವರ ಕಾಯಕ ತತ್ವವನ್ನು ಪಾಲಿಸಿದ್ದರು ಎಂದು ಹೇಳಿದರು.

ಶ್ರೀ ಸಿದ್ದರಾಮೇಶ್ವರರು ಬಾಲ್ಯದಲ್ಲಿಯೇ ವಯಸ್ಸಿಗೆ ಮೀರಿ ಜ್ಞಾನ ಮತ್ತು ನಡವಳಿಕೆ ಮೂಲಕ ಪವಾಡಪುರುಷರಾಗುವ ಎಲ್ಲ ಗುಣ ಹೊಂದಿದ್ದರು. ಅವರು ಶ್ರೀಶೈಲ ಮಲ್ಲಿಮಾರ್ಜುನನ ಆಶೀರ್ವಾದ ಪಡೆದವರು. ಮಲ್ಲಿಕಾರ್ಜುನ ಭಿಕ್ಷೆಗೆ ಬಂದ ಸಂದರ್ಭದಲ್ಲಿ ಶ್ರೀಶೈಲಕ್ಕೆ ತೆರಳಿ ಅಲ್ಲಿಯೇ ತಪಸ್ಸು ಮಾಡಿ ಶ್ರೀಶೈಲ ಮಲ್ಲಿಕಾರ್ಜುನನ್ನು ಒಲಿಸಿಕೊಳ್ಳುತ್ತಾರೆ. ಕಾಯಕದ ಮೂಲಕ ಪವಾಡ ಸೃಷ್ಟಿಸಿದವರು ಶ್ರೀ ಸಿದ್ದರಾಮೇಶ್ವರರು ಎಂದರು.

ಬಸವಣ್ಣನವರು ಕಾಯಕೇ ಕೈಲಾಸ ಎಂದರು. ಕಾಯಕ ಪೂಜೆಗಿಂತ ದೊಡ್ಡದು. ಭಗವಂತ ಎದುರು ಬಂದರೂ ನಿಮ್ಮ ಕಾಯಕ ನಿಲ್ಲಿಸಬೇಡ ಎಂದು ಬಸವಣ್ಣನವರು ಹೇಳಿದ್ದರು. ಅಂತಹ ಅದಮ್ಯ ಕಾಯಕದ ಮೂಲಕ ಪವಾಡ ಮಾಡಿದವರು ಶ್ರೀ ಸಿದ್ದರಾಮೇಶ್ವರರು. ಸೊಲ್ಲಾಪುರದಲ್ಲಿ ಬರಗಾಲ ಬಂದಾಗ ನಾಲ್ಕು ಸಾವಿರ ಶರಣರನ್ನು ಸೇರಿಸಿ ಕೆರೆ ಕಟ್ಟಿಸಿದರು. ಅದರಲ್ಲಿ ಇಂದಿಗೂ ನೀರಿದೆ ಎಂದು ಹೇಳಿದರು.

ನಾನು ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ ಹಾಗೂ ಮಾಜಿ ಸಂಸದ ಬಸವರಾಜು ಅವರ ಜೊತೆ ಎರಡು ದಶಕಗಳ ಕಾಲ ಕೆಲಸ ಮಾಡುವ ಅವಕಾಶ ಪಡೆದಿದ್ದೆ. ಸಣ್ಣ ನಿರಾವರಿ ಇಲಾಖೆಯಲ್ಲಿ ದೊಡ್ಡ ಸಾಧನೆ ಮಾಡಿರುವುದು ಮಾಧುಸ್ವಾಮಿಯವರು. ಅವರು ಬಹಳ ಅದ್ಭುತವಾದ ಕೆಲಸಗಳನ್ನು ಮಾಡಿದ್ದಾರೆ. ಬೆಂಗಳೂರು ಗ್ರಾಮಾಂತರ, ತುಮಕೂರು, ಹಾಸನ ಜಿಲ್ಲೆಗಳಲ್ಲಿ ಅವರು ಮಾಡಿರುವ ಕಾರ್ಯಗಳು ಶ್ಲಾಘನೀಯ. ಚಿಕ್ಕನಾಯಕನಹಳ್ಳಿಯ ದೊಡ್ಡ ನಾಯಕ ಮಾಧುಸ್ವಾಮಿಯವರು, ಮಾಜಿ ಸಂಸದ ಬಸವರಾಜು ಅವರು ಹೇಮಾವತಿ ನೀರಿಗಾಗಿ ನಿರಂತರ ಹೋರಾಟ ಮಾಡಿದ್ದಾರೆ. ನೊಳಂಬರ ನಾಡಿನಲ್ಲಿ ನೀರಾವರಿ ಮಾಡುವ ಸೌಭಾಗ್ಯ ನನಗೆ ಸಿಕ್ಕಿದೆ. ಕೆರೆ ತುಂಬಿಸುವ ಕೆಲಸ ಮಾಡಿದೆ. ಗೋರೂರು ಹೆಬ್ಬೂರು ಏತ ನೀರಾವರಿ ಯೋಜನೆ 30 ವರ್ಷದಿಂದ ನೆನೆಗುದಿಗೆ ಬಿದ್ದಿತ್ತು. ಹದಿನೆಂಟು ತಿಂಗಳಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಂಡು, ಪರಮಪೂಜ್ಯ ಶ್ರೀ ಶಿವಕುಮಾರಸ್ವಾಮಿ ಹಾಗೂ ಬಾಲಗಂಗಾಧರ ನಾಥ ಸ್ವಾಮೀಜಿ ಅವರ ಕೈಯಿಂದ ಉದ್ಘಾಟನೆ ಮಾಡಿಸಿದೆ. ನೀರಾವರಿ ಸಚಿವನಾಗಿ ಸುಮಾರು ಏಳೂವರೆ ಲಕ್ಷ ಎಕರೆ ಜಮೀನು ನೀರಾವರಿ ಮಾಡಿದ ಸಂತೃಪ್ತಿ ಇದೆ ಎಂದರು.

> ಕಾಯಕ ಎಂದರೆ ಹೊಟ್ಟೆಪಾಡಿಗಾಗಿ ಮಾಡುವ ಕೆಲಸ ಅಲ್ಲ. ಕಾಯಕ ಅಂದರೆ ಪರಿಪೂರ್ಣತೆ. ಆ ಸಂದರ್ಭದಲ್ಲಿ ರೈತರಿಗೆ ನೀರು, ನೀರಾವರಿ ಮಹತ್ವ ಹೇಳಿಕೊಟ್ಟವರು, ಮಣ್ಣಿನ ಮಹತ್ವ, ಬದುಕಿನ ಜೀವಾಳ ಎನ್ನುವುದನ್ನು ತೋರಿಸಿದವರು ಶ್ರೀ ಸಿದ್ದರಾಮೇಶ್ವರರು. ನೊಳಂಬ ಸಮಾಜದಲ್ಲಿ ಕಾಯಕ ಎನ್ನುವುದು ರಕ್ತಗತವಾಗಿ ಬಂದಿದೆ. ಕಾಯಕ ಸಮಾಜಕ್ಕೆ ಎಂದೂ ಬಡತನ, ದುಃಖ ಬರುವುದಿಲ್ಲ. ಕಷ್ಟಗಳನ್ನು ಮೆಟ್ಟಿ ನಿಲ್ಲುವ ಶಕ್ತಿ ನೊಳಂಬ ಸಮುದಾಯಕ್ಕೆ ಇದೆ ಎಂದು ಹೇಳಿದರು.

ಶರಣರ ಸಾಹಿತ್ಯ ಮತ್ತು ಅವರ ವಿಚಾರಧಾರೆಗಳನ್ನು ಯುವ ಪೀಳಿಗೆಗೆ ತಿಳಿಸುವ ಕೆಲಸವಾಗಬೇಕಿದೆ. ಇತ್ತೀಚೆಗೆ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ ಹೆಚ್ಚಾಗಿದೆ. ನಾಗರಿಕತೆ ಮತ್ತು ಸಂಸ್ಕೃತಿ ಬೇರೆ ಬೇರೆ. ಇದನ್ನು ಅರ್ಥ ಮಾಡಿಕೊಂಡು ನಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗಬೇಕು. ಈ ಮೂಲಕ ಶ್ರೀ ಸಿದ್ದರಾಮೇಶ್ವರ ಜಯಂತಿ ಆಯೋಜನೆ ಮಾಡಿರುವುಸು ಸಾರ್ಥಕವಾಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ತುಮಕೂರಿನ ಶ್ರೀ ಸಿದ್ದಗಂಗಾ ಮಠದ ಪೀಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಅರಸೀಕರೆಯ ಜ್ಞಾನಪ್ರಭು ಸ್ವಾಮೀಜಿ, ಶಿವಶಂಕರ ಶಿವಯೋಗಿ ಮಹಾ ಸ್ವಾಮಿಗಳು, ಮಾಜಿ ಸಚಿವರಾದ ಜೆ.ಸಿ. ಮಾಧುಸ್ವಾಮಿ, ಡಾ. ಸಿ.ಎನ್. ಅಶ್ವತ್ಥ್ ನಾರಾಯಣ, ಸಿ.ಟಿ. ರವಿ, ನಿವೃತ್ತ ಡಿಜಿಪಿ ಶಂಕರ ಬಿದರಿ ಸೇರಿದಂತೆ ಅನೇಕ ಗಣ್ಯರು ಹಾಜರಿದ್ದರು.

# ಸಂಕ್ರಾಂತಿ ಸಂಭ್ರಮಕ್ಕೆ ವೇದಿಕೆಯಾದ ಬಿಂಕದಕಟ್ಟಿ ಝೂ

▶▶ಮೊದಲನೇ ಪುಟದಿಂದ

ಅರಣ್ಯ ಇಲಾಖೆ ಪ್ರಾಣಿ ಸಂಗ್ರಹಾಲಯುವನ್ನು ಸಾಕಷ್ಟು ಅಭಿವೃದ್ಧಿ ಪಡಿಸಿರುವುದು ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ವಾರಾಂತ್ಯ ಹಾಗೂ ಸಂಕ್ರಾಂತಿ ಹಬ್ಬದ ರಜೆಯಲ್ಲಿ ಹೊಸ ಅತಿಥಿಗಳೊಂದಿಗೆ ಕಳೆದು ಪ್ರಕೃತಿಯ ಮಡಿಲಲ್ಲಿ ಹಬ್ಬವಾಚರಿಸಿದ ಹೊಸ ಹುಮ್ಮಸ್ಸಿನೊಂದಿಗೆ ಹಿಂದಿರುಗಿದರು.

# ಭಕ್ತಿಪೂರ್ಣ ತೆಪ್ಪೋತ್ಸವ ಸಂಪನ್ನ

▶▶ಮೊದಲನೇ ಪುಟದಿಂದ

ಧಾರವಾಡದ ಹೆಸರಾಂತ ಕಲಾವಿದರಾದ ಎಸ್.ಎಸ್. ಹಿರೇಮಠ ಸಂಗಡಿಗರು ಮತ್ತು ಹರ್ಲಾಪೂರದ ಸಿ.ವಿ ಸಿ.ಡಿ ಕಲಾ ತಂಡದವವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ನಂತರ ಶ್ರೀ ಮಠದ ಸಂಪ್ರದಾಯದಂತೆ ಗಂಗಾರತಿ ಜರುಗಿ–ತು. ನಂತರ ಗುಜಮಾಗಡಿ ಗ್ರಾಮದ ಈಶ್ವರಯ್ಯ ಮತ್ತು ಶಂಕ್ರಮ್ಮ ಹಿರೇಮಠ ಹಾಗೂ ಮನ್ನಾಪುರ ಗ್ರಾಮದವರಾದ ಈಶ್ವರಯ್ಯ ಸುನಂದ ಹಿರೇಮಠ ದಂಪತಿಗಳು ಸಂಕಲ್ಪ ಪೂಜೆ ನೆರವೇರಿಸಿ, ತೆಪ್ಪೋತ್ಸವಕ್ಕೆ ಚಾಲನೆ ನೀಡಿದರು.

ತೆಪ್ಪಗಳ ನಡುವೆ ಹಲಗೆಯಿಂದ ನಿರ್ಮಿಸಲಾದ ಭವ್ಯ ವೇದಿಕೆಯಲ್ಲಿ ಅಲಂಕೃತ ಗೊಂಡ ಪಲ್ಲಕ್ಕಿಯಲ್ಲಿ ಶ್ರೀ ಗವಿಸಿದ್ದೇಶ್ವರ ಮೂರ್ತಿಯನ್ನು ಮಂಗಳವಾದ್ಯಗಳೊಂದಿಗೆ ಕರೆ ತಂದು ಮೂಹೂರ್ತಗೊಳಿಸಲಾಯಿತು. ತೆಪ್ಪವನ್ನು ನಾಲ್ಕು ದಿಕ್ಕುಗಳಲ್ಲಿ ಭಕ್ತಾಧಿಗಳು ಹಗ್ಗದ ಮೂಲಕ ಹಾಗೂ ನಾವಿಕರ ಸಹಾಯದಿಂದ ಹುಟ್ಟು ಹಾಕಿ ಎರಡು ಸುತ್ತು ಪ್ರದಕ್ಷಿಣೆಯನ್ನು ಹಾಕಲಾಯಿತು. ಪ್ರದಕ್ಷಿಣೆ ಸಂದರ್ಭದಲ್ಲಿ ಶಕುಂತಲಾ ಭಿನ್ನಾಳ ಹಾಗೂ ಸಂಗಡಿಗರಿಂದ ಶ್ರೀ ಗವಿಮಠಾಧೀಶ ಮಂಗಳ ಗೀತೆಯ ಸಂಗೀತ ಕಾರ್ಯಕ್ರಮ ಜರುಗಿತು. ಬಳಗಾನೂರಿನ ಶ್ರೀ ಶಿವಶಾಂತವೀರ ಮಹಾಸ್ವಾಮಿಗಳು, ಬಿಜಕಲ್‌ನ ಶಿವಶಾಂತವೀರ ಶರಣರು, ಗುಲಗಂಜಿ ಮಠದ ಶ್ರೀ ಶಿವಲಿಂಗ ಮಹಾಸ್ವಾಮಿಗಳು, ಬೂದಿಹೊಸಳ್ಳಿಯ ಶ್ರೀ ಭೂದೇಶ್ವರ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು.

# ಅಗಸ್ತ್ಯ ತೀರ್ಥದಲ್ಲಿ ಭಕ್ತರ ಪುಣ್ಯಸ್ನಾನ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಮಕರ ಸಂಕ್ರಾಂತಿಯಂದು ಪುಣ್ಯಕ್ಷೇತ್ರಗಳಲ್ಲಿ ಸ್ನಾನ ಮಾಡಬೇಕೆನ್ನುವ ಪ್ರತೀತಿ ಇರುವುದರಿಂದ ಅನೇಕ ಕ್ಷೇತ್ರಗಳಲ್ಲಿ ಜನರು ಈ ದಿನದಂದ ಪುಣ್ಯಸ್ನಾನಕ್ಕೆ ತೆರಳುತ್ತಾರೆ. ಅದೇ ರೀತಿ ಪಟ್ಟಣದ ಹೊರವಲಯದಲ್ಲಿರುವ ಅಗಸ್ತ್ಯತೀರ್ಥ ಕ್ಷೇತ್ರವು ಪುರಾಣ ಮಹತ್ವದ್ದಾಗಿದ್ದು, ಇಲ್ಲಿಯೂ ಸಹ ಸ್ನಾನ ಮಾಡಲೆಂದು ಮಕರ ಸಂಕ್ರಾಂತಿ ದಿವಸ ಸಾವಿರಾರು ಭಕ್ತರು ಆಗಮಿಸುತ್ತಾರೆ.

ಮಕರ ಸಂಕ್ರಾಂತಿಯಂದು ಇಲ್ಲಿನ ಅಗಸ್ತ್ಯತೀರ್ಥದ ಬಾವಿಗಳಲ್ಲಿ ಜನರು ಪುಣ್ಯಸ್ನಾನ ಮಾಡಿ ಪುನೀತರಾದರು. ಈ ಕ್ಷೇತ್ರದ ಜಾತ್ರೆಯು ಸಹ ಮಂಗಳವಾರ ಮತ್ತು ಬುಧವಾರ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಸಂಕ್ರಾಂತಿಯ ಪುಣ್ಯಸ್ನಾನ, ಪುಣ್ಯಕ್ಷೇತ್ರ ದರ್ಶನಕ್ಕಾಗಿ ಸುತ್ತಮುತ್ತಲಿನ ಹಳ್ಳಿಗಳಿಂದ ಸಾವಿರಾರು ಜನರು ಆಗಮಿಸಿ ಪುಣ್ಯ ಸ್ನಾನ ಮಾಡಿದರು.

ಅಗಸ್ತ್ಯತೀರ್ಥದ ಈ ತೀರ್ಥಬಾವಿಗಳು ಪವಿತ್ರವಾಗಿದ್ದು, ಹಿಂದೆ ಶವ ಸಂಸ್ಕಾರದ ಅಸ್ಥಿಯನ್ನು ಬಿಡಲು ದೂರದ ಪ್ರದೇಶಗಳಿಂದ ಬರುತ್ತಿದ್ದ–ರೆಂದು ಹಾಗೂ ಇಲ್ಲಿ ಸ್ನಾನ ಮಾಡುವುದರಿಂದ ರೋಗ–ರುಜಿನಗಳು ಮಾಯವಾಗಿ, ಪಾಪಕರ್ಮಗಳು ಕಳೆದು ಪುಣ್ಯ ಲಭಿಸುತ್ತದೆ ಎಂಬ ಪ್ರತೀತಿಯಿದೆ. ಇಲ್ಲಿನ ಅಕ್ಕತಂಗಿಯರ ಬಾವಿ ಎಂದು ಕರೆಯಲ್ಪಡುವ ಶಿಥಿಲಗೊಂಡಿರುವ ಇದೇ ಬಾವಿಗೆ ಸಂಕ್ರಮಣದಂದು ಪುರಸಭೆಯವರು ವರ್ಷಕ್ಕೊಮ್ಮೆ ನೀರು ಬಿಟ್ಟು ಸ್ನಾನ ಮಾಡಲು ಅನುಕೂಲ ಮಾಡಿಕೊಡುತ್ತಿದ್ದಾರೆ.

ಪಟ್ಟಣ ಹಾಗೂ ಸುತ್ತಮುತ್ತಲಿನ ಸಾವಿರಾರು ಜನರು ಸೋಮವಾರ ಮುಂಜಾನೆಯಿಂದಲೇ ಈ ಕ್ಷೇತ್ರದ ಬಾವಿಯಲ್ಲಿ ಪುಣ್ಯಸ್ನಾನ ಮಾಡಿ ಸ್ಥಳೀಯ ದೇವರಿಗೆ ಪೂಜೆ ಸಲ್ಲಿಸಿದರು.

### ಪ್ರೇಕ್ಷಕರ ಮನಸೆಳೆದ ಭೀಮ, ದುರ್ಯೋಧನ, ಅಶ್ವತ್ಥಾಮ, ಕೃಷ್ಣ

# ಜನಮನ ಸೂರೆಗೊಂಡ 'ರಕ್ತರಾತ್ರಿ' ನಾಟಕ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು




ಬೆಂಗಳೂರಿನ ಮುದ್ದಿನ ಪಾಳ್ಯ ಸರ್ಕಲ್ ಬಳಿ ಹಿರಿಯ ರಂಗಕರ್ಮಿ ಬಿ.ಎಂ. ಗಂಗರಾಜು ಪಟೇಲ್ ಇವರ ಜನ್ಮದಿನೋತ್ಸವದ ಪ್ರಯುಕ್ತ ಏಳು ದಿನಗಳ ಕಾಲ ನೇಪಥ್ಯಕ್ಕೆ ಸರಿಯುತ್ತಿರುವ ಪೌರಾಣಿಕ ನಾಟಕಗಳ ಉಳಿವಿಗಾಗಿ ಪೌರಾಣಿಕ ನಾಟಕೋತ್ಸವ ಸಪ್ತಾಹವನ್ನು ವಿಶಿಷ್ಟವಾಗಿ ಆಯೋಜಿಸಲಾಗಿತ್ತು.

ಮೂರನೇ ದಿನ ಉತ್ತರ ಕರ್ನಾಟಕದ ಕೂಡ್ಲಿಗಿ ತಾಲೂಕಿನ ಸೂಲದಹಳ್ಳಿಯ ಕಂದಗಲ್ಲು ಹನುಮಂತರಾಯ ಕಲಾ ಸಂಘದ ಕಲಾವಿದರು ಪ್ರದರ್ಶಿಸಿದ 'ರಕ್ತರಾತ್ರಿ' ನಾಟಕ ಪ್ರೇಕ್ಷಕರ ಮನ ಸೂರೆಗೊಂಡಿತು. ಇದಕ್ಕೂ ಮುನ್ನ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ ಪ್ರದರ್ಶನ ಉದ್ಘಾಟಿಸಿದರು. ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಶಾಂತಕುಮಾರ್ ಬೆಂಗಳೂರು, ಹಿರಿಯ ರಂಗಕರ್ಮಿ ಡಾ.ಮಾಯಣ್ಣ ಗೌಡರು ಬೆಂಗಳೂರು, ನಾಟಕ ಅಕಾಡಮಿ ಪ್ರಶಸ್ತಿ ಪುರಸ್ಕೃತ ಡಾ.ರಮೇಶ್ ಹಂಚಿನಮನೆ, ಕಲಾಸಂಘದ ಕಾರ್ಯದರ್ಶಿ ಹಾಗು ನಾಟಕದ ನಿರ್ದೇಶಕ ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

> ಕಿಕ್ಕಿರಿದು ಸೇರಿದ್ದ ಜನಸ್ತೋಮನದ ಮಧ್ಯೆ ತಮ್ಮ ಅಭಿನಯ, ಸಂಭಾಷಣಾ ಶೈಲಿ, ಹಾವಭಾವಗಳಿಂದ ಹಗರಿಬೊಮ್ಮನಹಳ್ಳಿಯ ಕಲಾವಿದ, ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಾ. ರಮೇಶ್ ಹಂಚಿನಮನೆ (ಭೀಮ), ಖ್ಯಾತ ವಕೀಲರಾದ ಹರೆಗೊಂಡನಹಳ್ಳಿ ಡಾ.ಡಿ. ಉಮಾಶಂಕರಗೌಡ (ದುರ್ಯೋಧನ), ಕೊಪ್ಪಳ ಜಿಲ್ಲಾ ಕಲಾವಿದರ ವೇದಿಕೆ ಅಧ್ಯಕ್ಷ, ಪತ್ರಕರ್ತ ಹಾಗು ಚಿತ್ರನಟ ಗಂಗಾವತಿ ನಾಗರಾಜ್ ಇಂಗಳಗಿ (ಅಶ್ವತ್ಥಾಮ), ಹಿರಿಯ ಕಲಾವಿದ ನರೇಂದ್ರ ಜಿ.ಹೊಳಲು (ಕೃಷ್ಣ) ಇವರು ಪ್ರೇಕ್ಷಕರ ಚಪ್ಪಾಳೆ, ಸಿಳ್ಳೆ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾದರು.

ಇನ್ನುಳಿದಂತೆ ಎಸ್. ಎಸ್.ವಿರುಪಾಕ್ಷಪ್ಪ ಹೇಗ್ಡಾಳ್ (ಶಕುನಿ), ಧನಂಜಯ ಕಣವಿ ನಾಯಕನಹಳ್ಳಿ (ಕರ್ಣ, ಗಂದರ್ವ), ತೋಟದ ಮನೆ ಮಾರುತೆಪ್ಪ ಹ್ಯಾಳ್ಯಾ (ಅರ್ಜುನ), ಬಸವರಾಜ ಹರೇಗೊಂಡನಹಳ್ಳಿ (ಕಲಿ, ಶಿವ), ಬಸವರಾಜ್‌ಸ್ವಾಮಿ ಜವಳಗೇರಾ (ಧರ್ಮರಾಯ) ತಮ್ಮ ಅತ್ಯುತ್ತಮ ನಟನೆಯಿಂದ ಜನ ಮೆಚ್ಚುಗೆಗೆ ಪಾತ್ರರಾದರು. ಬಳ್ಳಾರಿ ವೀಣಾ ಆದೋನಿ (ದ್ರೌಪದಿ), ಕಾಶಿಬಾಯಿ ದಾವಣಗೆರೆ (ಉತ್ತರೆ), ಜಯಶ್ರೀ ಪಾಟೀಲ್ (ಭಾನುಮತಿ), ಕಾವ್ಯ ಮೈಸೂರು (ಅನಂಗಪುಷ್ಪ) ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡಿದರು. ನಾಟಕದ ನಿರ್ದೇಶಕ, ಹಾರ್ಮೋನಿಯಂ ಮಾಂತ್ರಿಕ ತಿಪ್ಪೇಸ್ವಾಮಿ ಸೂಲದಹಳ್ಳಿ ಮೈ ನವಿರೇಳಿಸುವ ಸಂಗೀತ ನೀಡಿದರು. ಆಕಾಶವಾಣಿ ಕಲಾವಿದ ಪಿ. ಚಂದ್ರಶೇಖರ್ ದಾವಣಗೆರೆ ತಬಲಾ ಸಾತ್ ನೀಡಿದರು.

ಚಾಮುಂಡೇಶ್ವರಿ ಡ್ರಾಮ ಸೀನ್ಸ್ ಮೈಸೂರು ಭವ್ಯ ರಂಗಸಜ್ಜಿಕೆ, ಮನ ಸೆಳೆಯುವ ಪ್ರಸಾದನದೊಂದಿಗೆ ಸೂಲದ ಹಳ್ಳಿ ತಿಪ್ಪೇಸ್ವಾಮಿ ನೇತೃತ್ವದ ತಂಡ ರಾಜ್ಯಧಾನಿಯಲ್ಲಿ ಅದ್ಭುತ ನಟನೆಯೊಂದಿಗೆ ಜನಮಾನಸದಲ್ಲಿ ಉಳಿಯುವಂಥ ಪ್ರದರ್ಶನ ನೀಡಿತು.

ಮಾಯಣ್ಣ ಗೌಡ, ವ್ಯವಸ್ಥಾಪಕ ಕುಮಾರಗೌಡ ಕಳಸ್ತವಾಡಿ ನಾಟಕ ಪ್ರದರ್ಶನ ನಿರ್ವಹಿಸಿದರು.

# ಭೋಗಿ ಹಬ್ಬ ಆಚರಣೆ


■ವಿಜಯಸಾಕ್ಷಿ ಸುದ್ದಿ, ನರೇಗಲ್ಲ



ಮಕರ ಸಂಕ್ರಾಂತಿಯ ಹಿಂದಿನ ದಿನ ಬರುವ ಭೋಗಿ ಹಬ್ಬವನ್ನು ನರೇಗಲ್ಲ ಹೋಬಳಿಯಾದ್ಯಂತ ಸೋಮವಾರ ಶ್ರದ್ಧಾ ಭಕ್ತಿಗಳಿಂದ ಆಚರಿಸಲಾಯಿತು. ಧನುರ್ಮಾಸದಲ್ಲಿ ಬರುವ ಭೋಗಿ ಹಬ್ಬ ವಿಶೇಷತೆಯಿಂದ ಕೂಡಿದ್ದು, ಸುಮಂಗಲೆಯರು ವೈದಿಕ ಮುತ್ತೈದೆಯರಿಗೆ ಮರದ ಬಾಗಿನ ನೀಡುವ ಮೂಲಕ ಈ ಹಬ್ಬವನ್ನು ಆಚರಿಸಿದರು.

ಸೂರ್ಯ ದಕ್ಷಿಣಾಯನದಿಂದ ಉತ್ತರಾಯಣದ ಕಡೆಗೆ ಚಲಿಸುವ ಮಹಾ ಪರ್ವವೇ ಸಂಕ್ರಮಣ ಎನಿಸಿಕೊಳ್ಳುತ್ತದೆ. ಆತ ಮಕರ ರಾಶಿಯಲ್ಲಿ ಈ ಪ್ರವೇಶವನ್ನು ಮಾಡುವುದರಿಂದ ಈ ಪುಣ್ಯ ಕಾಲವನ್ನು ಮಕರ ಸಂಕ್ರಮಣ ಎಂದು ಕರೆಯಲಾಗುತ್ತದೆ. ಮಕರ ಸಂಕ್ರಮಣದ ಮೊದಲ ಹಬ್ಬ ಭೋಗಿ ಹಬ್ಬವಾಗಿದೆ.

ಅಂದು ಬೆಳಿಗ್ಗೆ ಸುಮಂಗಲೆಯರು ನಿತ್ಯದ ಜೀವನಕ್ಕೆ ಬೇಕಾಗುವ ದವಸ–ಧಾನ್ಯಗಳನ್ನು ಮೊರದಲ್ಲಿ ಇರಿಸಿ ದಾನ ಕೊಡುವುದೇ ಭೋಗಿ ಹಬ್ಬದ ವೈಶಿಷ್ಟ್ಯತೆಯಾಗಿದೆ.



7ನೇ ಸಾಲಿನ ವಾಣಿಜ್ಯ ವಿಭಾಗದ ಮುನ್ಸಿಪಲ್ ಕಾಲೇಜಿನ ಶಿಕ್ಷಕರಾದ ಈಶ್ವರಶೆಟ್ಟಿ ರೇಷ್ಮಿ ಅವರನ್ನು ವಿದ್ಯಾರ್ಥಿಗಳು ಸನ್ಮಾನಿಸಿದರು. ಈ ಸಂದರ್ಭದಲ್ಲಿ ವಿನೋದ ಮೀಸಾಳ, ರಾಘವೇಂದ್ರ ಪೂಜಾರ, ಯಲ್ಲಪ್ಪ ಬುಟ್ಟಾ, ಮಹಮ್ಮದಯೂಸುಫ ಮುಲ್ಲಾ, ಹಜುರಸಾಬ ನದಾಫ್ ಅಂಬರೇಶ ನೆಗಿನಹಾಳಮಠ, ಹನಮಂತ ಪೂಜಾರ, ಭರತ ಭಾಂಡಗೆ ಮುಂತಾದವರು ಉಪಸ್ಥಿತರಿದ್ದರು.

### ಆಕಾಶವಾಣಿ ಧಾರವಾಡ ಕೇಂದ್ರದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ

# ಆಕಾಶವಾಣಿ ಸರ್ವಶಕ್ತ, ಜನಪರ ಮಾಧ್ಯಮ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಪ್ರಧಾನಮಂತ್ರಿ ನರೇಂದ್ರ ಮೋದಿಯವರು, ಆಕಾಶವಾಣಿಯ ತಮ್ಮ 'ಮನ್ ಕಿ ಬಾತ್' ಮೂಲಕ ದೇಶದ ಕೊನೆಯ ತುದಿ ಹಾಗೂ ಅಂತಿಮ ವ್ಯಕ್ತಿಯನ್ನು ತಲುಪಲು ಸಾಧ್ಯವಾಗಿದೆ ಎಂದು ಅಭಿಮಾನದಿಂದ ಸ್ಮರಿಸಿ, ಶ್ಲಾಘಿಸಿರುವುದು, ಆಕಾಶವಾಣಿಯ ಸರ್ವಶಕ್ತತೆ ಮತ್ತು ಸರ್ವವ್ಯಾಪಕತೆಯನ್ನು ಬಿಂಬಿಸುತ್ತದೆ ಎಂದು ಕೇಂದ್ರದ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ನಗರದ 'ಸೃಜನಾ' ಡಾ. ಅಣ್ಣಾಜಿರಾವ ಸಿರೂರ ರಂಗಮಂದಿರದಲ್ಲಿ ಆಯೋಜಿಸಿದ್ದ ಆಕಾಶವಾಣಿ ಧಾರವಾಡ ಕೇಂದ್ರದ ಅಮೃತ ಮಹೋತ್ಸವದ ಪ್ರಧಾನ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ, 'ಆಕಾಶವಾಣಿಯ ಅಮೃತ ಘಳಿಗೆ' ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಆಕಾಶವಾಣಿ 'ಸಿಗ್ನೇಚರ್ ಟ್ಯೂನ್' ಮಾಧುರ್ಯಕ್ಕೆ ಮಾನಸೋಲದವರಿಲ್ಲ. ಶ್ರೀಸಾಮಾನ್ಯನ ಹೃದಯವನ್ನು ತಲುಪಿ, ಜ್ಞಾನವನ್ನು ಬೆಳಗಿದ ರೀತಿ ವಿಶೇಷವಾದದ್ದು. ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರು, ಧಾರವಾಡ ಆಕಾಶವಾಣಿಯ ಅಮೃತ ಮಹೋತ್ಸವಕ್ಕೆ ತಮ್ಮ ಶುಭಾಶಯ ಸಂದೇಶ ತಿಳಿಸಿದ್ದು, ಸದ್ಯದಲ್ಲೇ ಭೇಟಿ ನೀಡಲಿದ್ದಾರೆ ಎಂದರು.

ಇನ್ನೋರ್ವ ಅಥಿತಿ, ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ಪಿ.ಎಲ್. ಪಾಟೀಲ ಮಾತನಾಡಿ, ಧಾರವಾಡ ಆಕಾಶವಾಣಿ ಮೂಲಕ ರೈತರಿಗೆ ವೈಜ್ಞಾನಿಕ ಕೃಷಿಯ ಮಾಹಿತಿಯನ್ನು 'ಕೃಷಿ ಶೋಧನೆ-ಸಾಧನೆ' ಕಾರ್ಯಕ್ರಮದ ಮುಖಾಂತರ ಹಂಗಾಮಿಗೆ ಅನುಗುಣವಾಗಿ ನೀಡಲು, ಇಂಗ್ಲೀಷ್ ಬಲ್ಲ ತಜ್ಞರಿಗೆ, ವಿಜ್ಞಾನಿಗಳಿಗೆ, ಕೃಷಿ ಸಲಹೆಗಳು ಕನ್ನಡ ಕಲಿಸಿವೆ ಎಂದು ಅಭಿಮಾನದಿಂದ ಹೇಳಿದರು.

ಕಾರ್ಯಕ್ರಮ ಮುಖ್ಯಸ್ಥ ಶರಣಬಸವ ಚೋಳಿನ ಪ್ರಾಸ್ತಾವಿಕವಾಗಿ ಮಾತನಾಡಿದರು. ಆಕಾಶವಾಣಿ ಧಾರವಾಡ ಕೇಂದ್ರದ ಉಪ ಮಹಾನಿರ್ದೇಶಕ ಕೆ.ಅರುಣ್ ಪ್ರಭಾಕರ ಅಧ್ಯಕ್ಷತೆ ವಹಿಸಿದ್ದರು. ನಿಲಯದ ಹಿರಿಯ ಕಲಾವಿದರಾದ ಸದಾಶಿವ ಐಹೊಳಿ ಪ್ರಾರ್ಥಿಸಿದರು. ಕಾರ್ಯಕ್ರಮ ನಿರ್ವಾಹಕಿ ಮಂಜುಳಾ ಪುರಾಣಿಕ ಸ್ವಾಗತಿಸಿದರು. ಹಿರಿಯ ಉದ್ಘೋಷಕಿ ಮಾಯಾ ರಾಮನ್ ನಿರೂಪಿಸಿದರು.



ಹುಬ್ಬಳ್ಳಿಯ ಡಾ. ಗೋವಿಂದ ಮಣ್ಣೂರ ರಚಿಸಿದ ನಗೆ ನಾಟಕ 'ಮೊಬೈಲ್ ಮಾವ' ಆಕಾಶವಾಣಿಯ ಹಿರಿಯ ಉದ್ಘೋಷಕಿ ಸುರೇಖಾ ಸುರೇಶ ನಿರ್ದೇಶನದಲ್ಲಿ ಮೂಡಿಬಂತು. ಡಾ.ಚೇತನ್ ನಾಯಕ, ಡಾ.ಶಶಿಧರ ನರೇಂದ್ರ, ರವಿ ಕುಲಕರ್ಣಿ, ಅನಂತ ದೇಶಪಾಂಡೆ, ವೀರಣ್ಣ ಪತ್ತಾರ, ನವೀನ ಮಹಾಲೆ, ಆರತಿ ದೇವಶಿಖಾಮಣಿ ಹಾಗೂ ಸನ್ಮತಿ ಅಂಗಡಿ ಪಾತ್ರಗಳನ್ನು ನಿರ್ವಹಿಸಿದರು. ರವಿ ರಸಾಳಕರ ನಾಟಕಕ್ಕೆ ಸಂಗೀತ ಸಂಯೋಜಿಸಿದರು. ಸಂತೋಷ ಗಜಾನನ ಮಹಾಲೆ ಪ್ರಸಾದನ ಹಾಗೂ ಬೆಳಕಿನ ವ್ಯವಸ್ಥೆ ನಿರ್ವಹಿಸಿದರು.

ಅಥಿತಿಗಳಾಗಿ ಪಾಲ್ಗೊಂಡಿದ್ದ ಬೆಳಗಾವಿಯ ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷ ಡಾ. ಪ್ರಭಾಕರ ಕೋರೆ ಮಾತನಾಡಿ, ಗಡಿ ಜಿಲ್ಲೆ ಬೆಳಗಾವಿಯ ಚಿಕ್ಕೋಡಿ ತಾಲೂಕಿನ ಅಂಕಲಗಿಯಲ್ಲಿ ತಮಗೆ, ವಿಶ್ವಾಸಾರ್ಹ ಸುದ್ದಿ, ಮಾಹಿತಿ ಮತ್ತು ಮನೋರಂಜನೆಗೆ ಆಧಾರವಾಗಿದ್ದು ಧಾರವಾಡ ಆಕಾಶವಾಣಿ ಕೇಂದ್ರ. ಪ್ರದೇಶ ಸಮಾಚಾರ ಈಗಲೂ ತಮಗೆ ಅಚ್ಚುಮೆಚ್ಚು. ಬಿ.ವಿ. ಭೂಮರಡ್ಡಿಯವರು ಪೇಟೆ ದರ, ಎಣ್ಣೆ ದರ ಹಾಗೂ ದಿನಸಿ ದರಗಳಿಗಾಗಿ, ಆಕಾಶವಾಣಿಯನ್ನು ಆಶ್ರಯಿಸಿದ್ದು ಉಲ್ಲೇಖನೀಯ. ಪಂ. ಭೀಮಸೇನ ಜೋಶಿ ಅವರು ತಮಗೆ ತಿಳಿಸಿದಂತೆ, ಮರಾಠಿ ನಾಟ್ಯ ಸಂಗೀತಕ್ಕೆ ಮೂಲ ಧಾರವಾಡದ ಜಾನಪದವಾಗಿದ್ದು, ಈ ಕಲೆ ಉಳಿದು, ಆ ಕಲಾವಿದರು ನಾಡನ್ನು ಬೆಳಗಲು ಸಾಧ್ಯವಾಗಿದ್ದು ಧಾರವಾಡ ಆಕಾಶವಾಣಿಯಿಂದಾಗಿ ಎಂದು ನುಡಿದರು.

ಆಕಾಶವಾಣಿ ಕಲಾವಿದರಾದ ಸದಾಶಿವ ಪಾಟೀಲ ಹಾಗೂ ಡಾ. ಶ್ರೀರಾಮ ಕಾಸರ ಶರಣಬಸವ ಚೋಳಿನ ಅವರು ರಚಿಸಿದ 'ರಾಗ ತರಂಗ, ನಾದ ತರಂಗ ಹೇಳ ತೀರದ ಆನಂದ' ಹಾಗೂ ಆನಂದ ಪಾಟೀಲ ಅವರು ರಚಿಸಿದ 'ಸಂಭ್ರಮವಿದು' ಅಮೃತ ಮಹೋತ್ಸವ ಆಶಯ ಗೀತೆಯನ್ನು, ರೇಖಾ ದಿನೇಶ ಹೆಗಡೆ ಹಾಗೂ ಶೃತಿ ಭಟ್ ಪ್ರಸ್ತುತಪಡಿಸಿದರು. ಶ್ರೀಹರಿ ದಿಗ್ಗಾವಿ ತಬಲಾ ಸಾಥ್ ಹಾಗೂ ಜಾಕೋಬ್ ದೇವಾನಂದ ಕೀಬೋರ್ಡ್ ಸಾಥ್ ನೀಡಿದರು.

ಬೆಳಗಾವಿ ಜಿಲ್ಲೆ ಬೈಲಹೊಂಗಲದ ಮಲ್ಲಮ್ಮ ಮೇಗೇರಿ ಹಾಗೂ ತಂಡ ಶ್ರೀ ಕೃಷ್ಣ ಪಾರಿಜಾತದ ಗೀತೆಗಳನ್ನು, ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲೂಕಿನ ಗಣೇಶ ಶಿಂಧೆ ಹಾಗೂ ತಂಡ ಗೋಂಧಳಿ ಹಾಗೂ ತುಮ್ಮರಗುದ್ದಿಯ ಮರೆಪ್ಪಾ ದಾಸರ ಹಾಗೂ ತಂಡದಿಂದ ತತ್ವ ಪದಗಳ ಗಾಯನ ಕಛೇರಿ ಮನಸೂರೆಗೊಂಡಿತು.

ಧಾರವಾಡದ ಹಿರಿಯ ಪಿಟೀಲು ಕಲಾವಿದರಾದ ಪಂ. ಬಿ.ಎಸ್. ಮಠ ಹಾಗೂ ವಿದುಷಿ ಅಕ್ಕಮಹಾದೇವಿ ಹಿರೇಮಠ ವಾಯೋಲಿನ್ ಜುಗಲ್‌ಬಂದಿಯಲ್ಲಿ 'ರಾಗ ಶ್ಯಾಮ ಕಲ್ಯಾಣ್' ಪ್ರಸ್ತುತಪಡಿಸಿದರು. ಪಂ. ಸಾತಲಿಂಗಪ್ಪ ದೇಸಾಯಿ ಕಲ್ಲೂರ ತಬಲಾ ಸಾಥ್ ನೀಡಿದರು. ಪದ್ಮಶ್ರೀ ಪಂ.ಎಂ. ವೆಂಕಟೇಶಕುಮಾರ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಕಛೇರಿ ಪ್ರಸ್ತುತ ಪಡಿಸಿದರು. ಶ್ರೀಧರ ಮಾಂಡ್ರೆ ತಬಲಾ ಸಾಥ್, ಸಾರಂಗ ಕುಲಕರ್ಣಿ ಹಾರ್ಮೋನಿಯಂ ಸಾಥ್ ನೀಡಿದರು.

# ಎಸ್‌ಎಸ್‌ಕೆ ಶ್ರೀ ಜಗದಂಬಾ ಆಂಗ್ಲೋ ಮಾಧ್ಯಮ ಶಾಲೆಗೆ ಬೆಸ್ಟ್ ಸ್ಕೂಲ್ ಅವಾರ್ಡ್

■ವಿಜಯಸಾಕ್ಷಿ ಸುದ್ದಿ, ಗದಗ

ಕಲಾಕುಂಜ ಫೌಂಡೇಶನ್ ಬಿವಾಡಿ ರಾಜಸ್ಥಾನ, ಅಲವರ ಇವರು ಲಲಿತ ಕಲೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಅತ್ಯುತ್ತಮ ಶಿಕ್ಷಣ ಸಂಸ್ಥೆಗೆ ಕೊಡಮಾಡುವ 2024-25ನೇ ಸಾಲಿನ ಬೆಸ್ಟ್ ಸ್ಕೂಲ್ ಅವಾರ್ಡ್ ಈ ಬಾರಿ ಬೆಟಗೇರಿಯ ನಗರದ ಎಸ್.ಎಸ್.ಕೆ. ಶ್ರೀ ಜಗದಂಬಾ ಆಂಗ್ಲೋ ಮಾಧ್ಯಮ ಪೂರ್ವ ಪ್ರಾಥಮಿಕ, ಪ್ರಾಥಮಿಕ ಹಾಗೂ ಪ್ರೌಢಶಾಲೆಗೆ ಲಭಿಸಿದೆ.



2023-24ನೇ ಸಾಲಿನಲ್ಲಿ ಮತ್ತು ಈ ಪ್ರಸಕ್ತ ವರ್ಷದಲ್ಲಿ ಸಾಂಸ್ಕೃತಿಕ ಹಾಗೂ ವಿಜ್ಞಾನ ಕ್ಷೇತ್ರದಲ್ಲಿ ಸತತ ಎರಡು ವರ್ಷದಲ್ಲಿ ಐದು ರಾಜ್ಯಮಟ್ಟ ಮತ್ತು ಏಳು ಅಂತಾರಾಷ್ಟ್ರೀಯಮಟ್ಟದ ಪ್ರಶಸ್ತಿ ಪಡೆದಿರುವದನ್ನು ಗಮನಿಸಿ ಹಾಗೂ ಚಿತ್ರಕಲೆಯಲ್ಲಿ 82 ಟಾಪ್ ಟೆನ್ ಪ್ರಶಸ್ತಿಯನ್ನು ಪಡೆದ ಮಕ್ಕಳಲ್ಲಿ ಅಡಗಿರುವ ಅಮೃತಾತ್ಮಕ ಕಲೆಯನ್ನು ತಿಳಿಸುವ ಮೂಲಕ ಅತಿಹೆಚ್ಚು ಮಕ್ಕಳನ್ನು ಸ್ಮರಣಾತ್ಮಕವಾಗಿ ಭಾಗವಹಿಸುವುದನ್ನು ಗಮನಿಸಿ ಈ ಸಾಲಿನ ಪ್ರಶಸ್ತಿಯನ್ನು ಎಸ್.ಎಸ್.ಕೆ. ಶ್ರೀ ಜಗದಂಬಾ ಶಿಕ್ಷಣ ಸಮಿತಿ ಪ್ರಶಸ್ತಿಯನ್ನು ನೀಡಿದೆ.

ಸಂಸ್ಥೆಯ ಚೇರಮನ್ ಗೋವಿಂದರಾಜ ವಿ.ಬಸವಾ, ವೈಸ್ ಚೇರಮನ್ ದತ್ತು ಯು.ಪವಾರ, ಎಸ್.ಎಸ್.ಕೆ ಪಂಚ ಟ್ರಸ್ಟ್ ಕಮಿಟಿ ಅಧ್ಯಕ್ಷ ಲೋಕನಾಥ ಬಿ.ಕಬಾಡಿ, ಸದಸ್ಯರಾದ ಸತ್ಯನಾರಾಯಣಸಾ ಕಬಾಡಿ, ಪಂಚ ಟ್ರಸ್ಟ್ ಕಮಿಟಿಯ ಎಲ್ಲ ಸದಸ್ಯರು, ಶಿಕ್ಷಣ ಸಂಸ್ಥೆಯ ಮುಖ್ಯೋಪಾಧ್ಯಾಯೆ ಎಸ್.ಡಿ. ಬೆಣಕಲ್, ಸಿ.ಎಸ್. ಹವಳದ ಅವರು ಶಾಲಾ ಶಿಕ್ಷಕರ ಬಳಗ ಮತ್ತು ವಿದ್ಯಾರ್ಥಿಗಳಿಗೆ ಅಭಿನಂದಿಸಿದ್ದಾರೆಂದು ಜಾಕೀರಹುಸೇನ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶ್ರೀ ಜಗದಂಬಾ ಶಾಲಾ ಮಕ್ಕಳಿಗೆ ಲಲಿತ ಕಲೆಯಲ್ಲಿ ಪ್ರಶಸ್ತಿ



■ವಿಜಯಸಾಕ್ಷಿ ಸುದ್ದಿ, ಗದಗ

ಇತ್ತೀಚೆಗೆ ರಾಜಸ್ಥಾನದ ಕಲಾಕುಂಜ ಫೌಂಡೇಶನ್ ಬಿವಾಡಿ ಇವರ ಸಂಯುಕ್ತಾಶ್ರಯದಲ್ಲಿ ನಡೆದ 8ನೇ ವರ್ಷದ ಇಂಟರ್‌ನ್ಯಾಷನಲ್ ಚಿಲ್ಡ್ರನ್ ಆರ್ಟ್ ಕಾಂಪಿಟೇಶನ್ ಚಿತ್ರಕಲಾ ಸ್ಪರ್ಧೆಯಲ್ಲಿ ಗದಗ-ಬೆಟಗೇರಿ ನಗರದ ಎಸ್‌ಎಸ್‌ಕೆ ಶ್ರೀ ಜಗದಂಬಾ ಶಿಕ್ಷಣ ಸಮಿತಿಯ ಎಸ್‌ಎಸ್‌ಕೆ ಶ್ರೀ ಜಗದಂಬಾ ಆಂಗ್ಲೋ ಮಾಧ್ಯಮ ಶಾಲೆ ಹಾಗೂ ಶ್ರೀಮತಿ ಎಲ್.ಎನ್. ಬದಿ ಆಂಗ್ಲೋ ಮಾಧ್ಯಮ ಪ್ರೌಢಶಾಲೆಯ 100 ವಿದ್ಯಾರ್ಥಿಗಳು ಭಾಗವಹಿಸಿ ವಿಷಯ ಪೂರಕ ಚಿತ್ರಗಳನ್ನು ರಚಿಸಿ ಬೆಸ್ಟ್ ಪೇಂಟಿಂಗ್‌ಗೆ ಆಯ್ಕೆಯಾಗಿ ಪ್ರಶಸ್ತಿ ಪಡೆದಿದ್ದಾರೆ.

ಪ್ರಾಥಮಿಕ ವಿಭಾಗ ಮಟ್ಟದಲ್ಲಿ 62 ಹಾಗೂ ಪ್ರೌಢ ವಿಭಾಗದಲ್ಲಿ 38 ವಿದ್ಯಾರ್ಥಿಗಳು ಭಾಗವಹಿಸಿ ಪ್ರಶಸ್ತಿಯನ್ನು ಪಡೆದಿದ್ದಾರೆ. ಇವರಿಗೆ ಚಿತ್ರಕಲೆ ಮತ್ತು ಕರಕುಶಲ ತರಬೇತಿ ನೀಡಿದ ಕಲಾವಿದ ಡಾ. ಜಾಕೀರಹುಸೇನ ಕೊರ್ಲಹಳ್ಳಿ ಇವರಿಗೆ ಹಾಗೂ ವಿದ್ಯಾರ್ಥಿಗಳಿಗೆ ಶಿಕ್ಷಣ ಸಂಸ್ಥೆಯ ಚೇರಮನ್ ಗೋವಿಂದರಾಜ ವಿ.ಬಸವಾ, ವೈಸ್ ಚೇರಮನ್ ದತ್ತು ಯು.ಪವಾರ, ಎಸ್.ಎಸ್.ಕೆ ಪಂಚ ಟ್ರಸ್ಟ್ ಕಮಿಟಿ ಅಧ್ಯಕ್ಷ ಲೋಕನಾಥ ಬಿ.ಕಬಾಡಿ, ಸದಸ್ಯ ಸತ್ಯನಾರಾಯಣಸಾ ಕಬಾಡಿ, ಪಂಚ ಟ್ರಸ್ಟ್ ಕಮಿಟಿಯ ಎಲ್ಲ ಸದಸ್ಯರು, ಮುಖ್ಯೋಪಾಧ್ಯಾಯರಾದ ಎಸ್.ಡಿ. ಬೆಣಕಲ್ ಹಾಗೂ ಸಿ.ಎಸ್. ಹವಳದ ಮತ್ತು ಎಲ್ಲ ಶಿಕ್ಷಕರು ಅಭಿನಂದಿಸಿದ್ದಾರೆ.



ಯಲ್ಲಪ್ಪ ಮಲ್ಲಪ್ಪ ಹರ್ನಾಳಗಿ ಹಾಗೂ ಮರುಳಸಿದ್ಧಪ್ಪ ದೊಡ್ಡಮನಿ ಜೊತೆಗೂಡಿ ಸಂಪಾದಿಸಿದ ಪ್ರಥಮ ಶಾಯಿರಿ ಸಂಕಲನ 'ನೂರ್ ಹನ್ನೊಂದು' ಸಂಕಲನ ಲೋಕಾರ್ಪಣೆಗೊಂಡಿತು. ಪ್ರೊ. ಸಿದ್ದಲಿಂಗೇಶ ಸಜ್ಜನಶೆಟ್ಟರ ಮಾತನಾಡಿದರು. ಅಧ್ಯಕ್ಷತೆಯನ್ನು ಚಿತ್ರದುರ್ಗದ ಹಿರಿಯ ಕವಿಗಳಾದ ಪರಮೇಶ್ವರಪ್ಪ ಕುದರಿಯವರು ವಹಿಸಿಕೊಂಡಿದ್ದರು. ಮುಖ್ಯ ಅಥಿತಿಗಳಾಗಿ ಎಸ್.ಬಿ. ಮಾಳಗೊಂಡ, ಎಂ.ಎಸ್. ಹುಲ್ಲೂರು ಪಾಲ್ಗೊಂಡಿದ್ದರು. ಶ್ರೀನಿವಾಸ ಚಿತ್ರಗಾರರು ಸ್ವಾಗತಿಸಿದರು, ಪ್ರೊ. ಬಸವರಾಜ ನೆಲಜರಿ ನಿರೂಪಿಸಿದರು. ಯಲ್ಲಪ್ಪ ಮಲ್ಲಪ್ಪ ಹರ್ನಾಳಗಿಯವರು ವಂದಿಸಿದರು.

# ಹರಜಾತ್ರೆಗೆ ಮುಖ್ಯಮಂತ್ರಿಗಳಿಗೆ ಆಹ್ವಾನ: ಖಂಡನೆ

■ವಿಜಯಸಾಕ್ಷಿ ಸುದ್ದಿ, ಗದಗ

ದಾವಣಗೇರೆ ಜಿಲ್ಲೆಯ ಹರಿಹರದಲ್ಲಿರುವ ವೀರಶೈವ ಲಿಂಗಾಯತ ಪಂಚಮಸಾಲಿ ಹರಜಾತ್ರೆಗೆ ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ಕೊಡುವುದು ಸಂವಿಧಾನ ಬಾಹಿರ ಎಂದು ಹೇಳಿದ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಆಮಂತ್ರಿಸಿರುವುದು ದುರಾದೃಷ್ಟಕರ. ಇನ್ನು ಮುಂದೆ ನಮ್ಮ ಸಮಾಜದ ಯಾವುದೇ ಸಭೆ, ಸಮಾರಂಭ ಹಾಗೂ ಕಾರ್ಯಕ್ರಮಗಳಿಗೆ ಯಾರೂ ಕೂಡಾ ಆಮಂತ್ರಣವನ್ನು ನೀಡಬಾರದು. ಒಂದು ವೇಳೆ ಆಮಂತ್ರಿಸಿದರೆ ಅಂತಹ ಕಾರ್ಯಕ್ರಮಕ್ಕೆ ಬರುವ ಮುಖ್ಯಮಂತ್ರಿಗೆ ಘೇರಾವ್ ಹಾಕುವುದರ ಜೊತೆಗೆ ಕಪ್ಪುಪಟ್ಟಿ ಪ್ರದರ್ಶಿಸಲಾಗುವುದು ಎಂದು ಗದಗ ಜಿಲ್ಲಾ ಪಂಚಮಸಾಲಿ ಸಮಾಜದ ಹಿರಿಯರಾದ ಮೋಹನ ಮಾಳಶೆಟ್ಟಿ ಹೇಳಿದರು.



ಮಂಗಳವಾರ ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಸಮಾಜದ ಸಭೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಗಳಿಗೆ ಗೌರವವಿದ್ದರೆ ಆತ್ಮಸಾಕ್ಷಿ ಇದ್ದರೆ ಪಂಚಮಸಾಲಿ ಸಮಾಜದ ಯಾವುದೇ ವೇದಿಕೆಗೆ ಹೋಗಬಾರದು ಎಂದರು.

ಪೂರ್ವಭಾವಿ ಸಭೆಯಲ್ಲಿ ಎಮ್.ಎಸ್. ಪರ್ವತಗೌಡ್ರ, ಈರಣ್ಣ ಬಾಳಿಕಾಯಿ, ಗಿರೀಶ ಸಂಶಿ, ವಕೀಲರು, ಜಿ.ಬಿ. ಹನಮನಾಳ, ವೀರಪಾಕ್ಷಗೌಡ ದೇಸಾಯಿಗೌಡ್ರ, ಈರಣ್ಣ ಬಾಳಿಕಾಯಿ, ವಿರೂಪಾಕ್ಷಪ್ಪ ಮಟ್ಟಿ, ಬಸವರಾಜ ದೇಸಾಯಿ, ಮಹೇಶ ಕರಿಬಿಷ್ಠಿ, ಮಾಹಾಂತೇಶ ನಲವಡಿ, ಅಯ್ಯಪ್ಪ ಅಂಗಡಿ, ಶಿವರಾಜಗೌಡ ಹಿರೇಮನಿಪಾಟೀಲ, ಬಸವರಾಜ ಮನಗುಂಡಿ, ರಮೇಶ ರೋಣದ, ಅಪ್ಪು ಮುಳವಾಡ, ಚಂದ್ರು ಪಾಟೀಲ್, ಈರಮ್ಮ ತಾಳಿಕೋಟಿ, ನಾಗರಾಜ್ ಗುರಿಕಾರ, ಮಂಜುನಾಥ ಬಾಣದ, ಚೇತನ ಅಬ್ಬಿಗೇರಿ, ಕುಮಾರ್ ಹೊಂಬಳ, ಶರಣಪ್ಪ ಗೊಳಗೊಳಕಿ, ಬಸವರಾಜ ಗುಡದೂರ, ಈರಣ್ಣ ಕುರ್ತಕೋಟಿ, ಮಂಜುನಾಥ ದಾಟನಾಳ, ಕೆ.ಎಸ್. ಲಕ್ಕುಂಡಿ ಮುಂತಾದವರು ಭಾಗವಹಿಸಿದ್ದರು.

# ರಷ್ಯಾ-ಉಕ್ರೇನ್ ಸಂಘರ್ಷ: ಕೇರಳದ ವ್ಯಕ್ತಿ ಸಾವು

■ವಿಜಯಸಾಕ್ಷಿ ಸುದ್ದಿ, ರಷ್ಯಾ

ರಷ್ಯಾ ಸೇನೆಗೆ ಸೇರುವಂತೆ ಒತ್ತಾಯಿಸಲ್ಪಟ್ಟ ಕೇರಳದ 32 ವರ್ಷದ ವ್ಯಕ್ತಿ ಗುಂಡು ಹಾರಿಸಿದ ನಂತರ ಯುದ್ಧಭೂಮಿಯಲ್ಲಿ ಸಾವನ್ನಪ್ಪಿದ್ದಾರೆ. ಮೃತ ಬಿನಿಲ್ ಬಾಬು ಕೇರಳದ ತ್ರಿಶೂರ್ ಜಿಲ್ಲೆಯ ಕುಟ್ಟನೆಲ್ಲೂರು ಮೂಲದವರು. ಭಾರತೀಯ ರಾಯಭಾರ ಕಚೇರಿಯು ಅವರ ಸಾವಿನ ಬಗ್ಗೆ ಅವರ ಕುಟುಂಬಕ್ಕೆ ಅಧಿಕೃತವಾಗಿ ಮಾಹಿತಿ ನೀಡಿದೆ. ಈ ಮಧ್ಯೆ, ತ್ರಿಶೂರ್ ನಿವಾಸಿಯೂ ಆಗಿರುವ ಮತ್ತೊಬ್ಬ ಮಲಯಾಳಿ ಉಕ್ರೇನ್‌ನಲ್ಲಿ ಶೆಲ್ ದಾಳಿಯಲ್ಲಿ ಗಾಯಗೊಂಡರು. ಕುರಂಚೇರಿ ಪ್ರದೇಶದ ಜೈನ್ ಕುರಿಯನ್ ಸ್ವಲ್ಪ ಸಮಯದವರೆಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಜೈನ್ ಎರಡು ದಿನಗಳ ಹಿಂದೆ ಮಾಸ್ಕೋ ಆಸ್ಪತ್ರೆಗೆ ತನ್ನ ಗಾಯ ಮತ್ತು ಸ್ವದೇಶಕ್ಕೆ ಆಗಮನದ ಬಗ್ಗೆ ವಾಟ್ಸಾಪ್ ಕರೆಯ ಮೂಲಕ ಕುಟುಂಬಕ್ಕೆ ಮಾಹಿತಿ ನೀಡಿದ್ದಾರೆ.

ಬಿನಿಲ್ ಮತ್ತು ಜೈನ್, ಇತರ ಕೆಲವರೊಂದಿಗೆ, ಚಲಕುಡಿಯಲ್ಲಿರುವ ಏಜೆಂಟ್ ಮೂಲಕ ರಷ್ಯಾಕ್ಕೆ ತೆರಳಿದ್ದರು.

ಕ್ಯಾಂಟೀನ್‌ನಲ್ಲಿ ಕೆಲಸ ಮಾಡಲು ರಷ್ಯಾಕ್ಕೆ ಹೋಗಿದ್ದ ಈ ಯುವಕರು ಯುದ್ಧ ವಲಯದಲ್ಲಿ ಸಿಕ್ಕಿಬಿದ್ದು ರಷ್ಯಾ ಪರವಾಗಿ ಬಲವಂತವಾಗಿ ಹೋರಾಡುತ್ತಿದ್ದಾರೆ. ಅವರು ಮನೆಗೆ ಮರಳಲು ಸಹಾಯವನ್ನು ಕೋರಿ ವೀಡಿಯೊ ಮೂಲಕ ಸಹಾಯಕ್ಕಾಗಿ ಮನವಿ ಮಾಡಿದರು.

ಪರಿಸ್ಥಿತಿಗೆ ಪ್ರತಿಕ್ರಿಯೆಯಾಗಿ, ಆರ್ಥೊಡಾಕ್ಸ್ ಚರ್ಚ್‌ನ ಮುಖ್ಯಸ್ಥ ಬಸೆಲಿಯೋಸ್ ಮಾರ್ಥೋಮಾ ಮ್ಯಾಥ್ಯೂಸ್, ರಷ್ಯಾದ ರಾಯಭಾರಿ ಡೆನಿಸ್ ಅಲಿಪೋವ್ ಅವರಿಗೆ ತುರ್ತು ಮನವಿಯನ್ನು ಮಾಡಿ, ತಕ್ಷಣದ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

### ಪಟ್ಟಣದ ಅಗಸ್ತ್ಯತೀರ್ಥ ಕ್ಷೇತ್ರದಲ್ಲಿ ವಿಷಮುಕ್ತ ಪುಣ್ಯಸ್ನಾನ ಅಭಿಯಾನ

# ಸೋಪು, ಶ್ಯಾಂಪೂ ಬದಲಿಗೆ ಕಡಲೆ ಹಿಟ್ಟು

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಅಗಸ್ತ್ಯತೀರ್ಥ ಕ್ಷೇತ್ರದಲ್ಲಿ ಹುಬ್ಬಳ್ಳಿಯ ವರದಶ್ರೀ ಫೌಂಡೇಷನ್ ಜ್ಞಾನ ಸಂಸತ್ತಿನ ವರದಶ್ರೀ ಪರಿವಾರ, ಅರ್ಗ್ಯಾನಿಕ್ ಅರಮನೆ, ಲಕ್ಷ್ಮೇಶ್ವರದ ಯುವ ಗೆಳೆಯರ ಬಳಗ ಮತ್ತು ಹಿರಿಯ ನಾಗರಿಕರು, ನಿವೃತ್ತ ನೌಕರರ ಸಂಘದ ಸಹಯೋಗದಲ್ಲಿ ವಿಷಮುಕ್ತ ಪುಣ್ಯಸ್ನಾನ ಅಭಿಯಾನವನ್ನು ಮಂಗಳವಾರ ಯಶಸ್ವಿಯಾಗಿ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಯುವ ಗೆಳೆಯರ ಬಳಗದ ಮಹೇಶ ಹೊಗೆಸೊಪ್ಪಿನ, ಡಿ.ಎಂ. ಪೂಜಾರ ಸಂಕ್ರಾಂತಿಯ ಪುಣ್ಯ ಸಮಯದಲ್ಲಿ ಬಹುತೇಕ ಜನರು ತೀರ್ಥ ಕ್ಷೇತ್ರಗಳಲ್ಲಿ ಪುಣ್ಯ ಸ್ನಾನ ಮಾಡುವದು ವಾಡಿಕೆ. ಈ ವೇಳೆಯಲ್ಲಿ ನದಿ, ಪುಷ್ಕರಣಿ ಇತ್ಯಾದಿಗಳಲ್ಲಿ ಸ್ನಾನ ಮಾಡುವಾಗ ಸೋಪು-ಶ್ಯಾಂಪೂ ಬಳಸುವದರಿಂದ ನೀರಿನಲ್ಲಿ ವಿಷದ ಪ್ರಮಾಣ ಸೇರಿದಂತಾಗುತ್ತದೆ.

ಈ ಹಿನ್ನೆಲೆಯಲ್ಲಿ ಹುಬ್ಬಳ್ಳಿಯ ವರದಶ್ರೀ ಫೌಂಡೇಶನ್‌ನವರು ಮಕರ ಸಂಕ್ರಮಣದಂದು ಪ್ರಪ್ರಥಮ ಬಾರಿಗೆ ವಿಷಮುಕ್ತ ಪುಣ್ಯ ಸ್ನಾನ ಅಭಿಯಾನವನ್ನು ರಾಜ್ಯಾದ್ಯಂತ ಕೈಗೊಂಡಿದ್ದು, ಸ್ನಾನಕ್ಕೆ ಸೋಪು, ಶ್ಯಾಂಪೂ ಬದಲಿ ಕಡಲೆ ಹಿಟ್ಟು ಬಳಸಿ ವಿಷಸ್ನಾನ ಬಿಡಿ ಎನ್ನುವ ವಿನೂತನ, ಜನರಿಗೆ ಅವಶ್ಯಕವಾಗಿರುವ ಮಾಹಿತಿ ನೀಡುವ ಕಾರ್ಯವನ್ನು ಮಾಡುತ್ತಿದ್ದಾರೆ.



ಪವಿತ್ರ ಕ್ಷೇತ್ರಗಳಲ್ಲಿ ತೀರ್ಥಸ್ನಾನ ಮಾಡುವರಿಗೆ ಉಚಿತವಾಗಿ ಸಾವಯವ ಕಡಲೆ ಹಿಟ್ಟಿನ ಪ್ಯಾಕೆಟ್‌ಗಳನ್ನು ಪೂರೈಸಿದ್ದು, ವರದಶ್ರೀ ಫೌಂಡೇಶನ್ ಅವರ ಪರಿಸರ ಸ್ನೇಹಿ ಮತ್ತು ಆಯುರ್ವೇದ ಔಷಧಿ ಗುಣವನ್ನು ಹೊಂದಿರುವ ಕಡಲೆ ಹಿಟ್ಟುಗಳನ್ನು ಬಳಸಿ ಇಂದಿನ ಪವಿತ್ರ ದಿನದಲ್ಲಿ ವಿಷಮುಕ್ತ ಸ್ನಾನ ಅಭಿಯಾನದಂತಹ ಜನಪಯೋಗಿ ಕಾರ್ಯಗಳಿಗೆ ನಮ್ಮ ಯುವ ಗೆಳೆಯರ ಬಳಗ ಸೇರಿದಂತೆ, ಪಟ್ಟಣದ ಹಿರಿಯ ನಾಗರೀಕರ ವೇದಿಕೆ, ನಿವೃತ್ತ ನೌಕರರ ಸಂಘ ಹಾಗೂ ಅನೇಕ ಸಂಘಟನೆಗಳು ಕೈಜೋಡಿಸಿವೆ. ಈ ಕಾರ್ಯವನ್ನು ಕೈಗೊಂಡು ಇದರಲ್ಲಿ ಸೇವೆ ಸಲ್ಲಿಸಲು ಅವಕಾಶ ನಮ್ಮ ಸಂಘಟನೆಗೆ ದೊರೆತಿರುವದು ನಮ್ಮ ಭಾಗ್ಯವಾಗಿದೆ ಎಂದರು.

ತೀರ್ಥಕ್ಷೇತ್ರಕ್ಕೆ ತೆರಳುವವರಿಗೆ ಹಾಗೂ ಸಾರ್ವಜನಿಕರಿಗೆ ಸೇರಿದಂತೆ ಸುಮಾರು 5 ಸಾವಿರಕ್ಕೂ ಅಧಿಕ ಕಡಲೆ ಹಿಟ್ಟಿನ ಪ್ಯಾಕೆಟ್‌ಗಳನ್ನು ವಿತರಿಸಲಾಯಿತು.

ಮಾಜಿ ಶಾಸಕ ಜಿ.ಎಸ್. ಗಡ್ಡದೇವರಮಠ, ಹಿರಿಯ ಮುಖಂಡ ಚಂಬಣ್ಣ ಬಾಳಿಕಾಯಿ, ಚನ್ನಪ್ಪ ಕೋಲಕಾರ, ಕಿರಣ ನವಲೆ, ಗಂಗಾಧರ ಮ್ಯಾಗೇರಿ, ಶಿವಯೋಗಿ ಮಾನ್ವಿ, ರಾಮು ಪೂಜಾರ, ರಾಜು ಪೂಜಾರ, ಶಿವಾನಂದ ಲಿಂಗಶೆಟ್ಟಿ, ಗುರಿಕಾರ, ಫಕ್ಕಿರೇಶ ನಂದೆಣ್ಣವರ ಹಾಗೂ ಹಿರಿಯ ನಾಗರಿಕರ ವೇದಿಕೆ, ನಿವೃತ್ತ ನೌಕರರ ಸಂಘ, ಯುವ ಗೆಳೆಯರ ಬಳಗದ ಸದಸ್ಯರು, ಸಾರ್ವಜನಿಕರು ಪಾಲ್ಗೊಂಡಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka